ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily
ಪ್ರತಿ ಸುದ್ದಿಯ ಧ್ವನಿ

Volume: 05 ಸಂಪುಟ: 05 | Issue:04 ಸಂಚಿಕೆ: 04 | Date: 06-01-2026 Tuesday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

## ಬಳ್ಳಾರಿ ಗಲಭೆ : ಹೆಚ್‌ಡಿಕೆ ಹೊಸ ಬಾಂಬ್: ಸತ್ಯ ಬಿಚ್ಚಿಟ್ಟ ಕೇಂದ್ರ ಸಚಿವ



ಬಳ್ಳಾರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಹತ್ಯೆ ಪ್ರಕರಣದಲ್ಲಿ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಕರ್ನಾಟಕ ಕಾಂಗ್ರೆಸ್ ಸರ್ಕಾರದ ವಿರುದ್ಧ ಸ್ಫೋಟಕ ಆರೋಪ ಮಾಡಿದ್ದು, ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. ಎರಡು ಬಾರಿ ಮರಣೋತ್ತರ ಪರೀಕ್ಷೆ, ಅಧಿಕಾರಿಗಳ ಅಮಾನತು, ಪರಿಹಾರದ ಮೂಲದ ಬಗ್ಗೆ ಪ್ರಶ್ನಿಸಿದ್ದಾರೆ. ಅಲ್ಲದೆ, ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಆಗ್ರಹಿಸಿದ್ದಾರೆ.
ಬಳ್ಳಾರಿಯಲ್ಲಿ ಶಾಸಕ ಜನಾರ್ದನ ರೆಡ್ಡಿ ಮನೆ ಬಳಿ ನಡೆದ ಗಲಭೆ ಹಾಗೂ ಕಾಂಗ್ರೆಸ್ ಕಾರ್ಯಕರ್ತನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.
ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಕರಣದ ತನಿಖೆಯಲ್ಲಿ ಹಲವು ಅನುಮಾನಗಳು ಮತ್ತು ಗಂಭೀರ ಲೋಪಗಳಿವೆ ಎಂದು ಆರೋಪಿಸಿದರು.
ಬಳ್ಳಾರಿ ಕಾಂಗ್ರೆಸ್ ಕಾರ್ಯಕರ್ತನ ಮೃತದೇಹವನ್ನು ಎರಡು ಬಾರಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ ಎಂಬ ಸ್ಫೋಟಕ ಆರೋಪ ಮಾಡಿದ ಕುಮಾರಸ್ವಾಮಿ, ಈ ನಡೆ ಅನುಮಾನಕ್ಕೆ ಕಾರಣವಾಗಿದೆ ಎಂದು ಹೇಳಿದರು.
'ಎರಡು ಬಾರಿ ಶವ ಪರೀಕ್ಷೆ ಮಾಡಿದ್ದೀರಿ? ಮೊದಲ ಬಾರಿ ಏನು ವರದಿ ಬಂತು? ಎರಡನೇ ಬಾರಿ ಯಾರು ಒತ್ತಾಯ ಮಾಡಿದರು? ಯಾರ ಅನುಮತಿಯಲ್ಲಿ ಮತ್ತೆ ಶವ ಪರೀಕ್ಷೆ ನಡೆಸಲಾಯಿತು? ಯಾರನ್ನು ಮೆಚ್ಚಿಸಲು ಈ ಆದೇಶ' ಎಂದು ಕುಮಾರಸ್ವಾಮಿ ಸರಣಿ ಪ್ರಶ್ನೆಗಳನ್ನು ಕೇಳಿದ್ದಾರೆ.
ಮೊದಲ ಮರಣೋತ್ತರ ಪರೀಕ್ಷೆಯಲ್ಲಿ ಗುಂಡು ತೆಗೆಯಲಾಗಲಿಲ್ಲ ಎಂಬ ಮಾಹಿತಿ ಇದೆ. ಇದಕ್ಕೆ ಕಾರಣವೇನು? ಇದನ್ನು ಸಮಗ್ರವಾಗಿ ತನಿಖೆ ಮಾಡುತ್ತೀರಾ ಅಥವಾ ನ್ಯಾಯವನ್ನು ಮರೆಮಾಚುತ್ತೀರಾ? ರಾಜ್ಯದ ಜನರಿಗೆ ರಕ್ಷಣೆ ನೀಡುವ ಜವಾಬ್ದಾರಿ ಸರ್ಕಾರಕ್ಕಿಲ್ಲವೇ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

## ಬಳ್ಳಾರಿ ಗಲಭೆ: 26 ಆರೋಪಿಗಳು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿಗೆ ಶಿಫ್ಟ್






ಬಳ್ಳಾರಿಯ ಬ್ಯಾನರ್ ಗಲಾಟೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ಬಲಿಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಗನ್‌ಮ್ಯಾನ್ ಗುರುಚರಣ್ ಸಿಂಗ್ ಸೇರಿದಂತೆ ಒಟ್ಟು 26 ಆರೋಪಿಗಳಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 14 ದಿನ ನ್ಯಾಯಾಂಗ ಬಂಧನ ವಿಧಿಸಿ ಆದೇಶ ಹೊರಡಿಸಿದೆ. ನ್ಯಾಯಾಲಯ ಆದೇಶ ಬೆನ್ನಲ್ಲೇ ಆರೋಪಿಗಳನ್ನು ಪರಪ್ಪನ ಅಗ್ರಹಾರ ಜೈಲಿಗೆ ಶಿಫ್ಟ್ ಮಾಡಲಾಗಿದೆ.
ಬಳ್ಳಾರಿಯ ಬ್ಯಾನರ್ ಗಲಾಟೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ಬಲಿ ಪ್ರಕರಣಕ್ಕೆ (ಛಿಚಿಟಟಚಿಡಿಥಿ ತುಡಿಟಚಿಟಿಛಿಜ ಅಚಿ ಜ ) ಸಂಬಂಧಿಸಿದಂತೆ ಕೊಲೆ ಆರೋಪಿ ಗುರುಚರಣ್ ಸಿಂಗ್ ಸೇರಿ 26 ಆರೋಪಿಗಳಿಗೆ 14 ದಿನ ನ್ಯಾಯಾಂಗ ಬಂಧನ (ಎಣಜುಛಿಚಿಟ ಅಣಾಣಂಜಥಿ) ವಿಧಿಸಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸೋಮವಾರ ಆದೇಶ ಹೊರಡಿಸಿದೆ. ಸದ್ಯ ಪೊಲೀಸರು ಪ್ರಕರಣದ ಆರೋಪಿಗಳನ್ನು ಪರಪ್ಪನ ಅಗ್ರಹಾರ ಜೈಲಿಗೆ ಶಿಫ್ಟ್ ಮಾಡಿದ್ದಾರೆ.
ಹೊಸ ವರ್ಷದ ಮೊದಲ ದಿನವೇ ಗಣಿನಾಡು ಬಳ್ಳಾರಿ ಹೊತ್ತಿ ಉರಿದಿತ್ತು. ಅಂದು ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ್ ಫೈರಿಂಗ್‌ಗೆ ಬಲಿ ಆಗಿದ್ದ. ಶಾಸಕ ಭರತ್ ರೆಡ್ಡಿ ಆಪ್ತ ಸತೀಶ್ ರೆಡ್ಡಿ ಗನ್‌ಮ್ಯಾನ್‌ನಿಂದಲೇ ಈ ಫೈರಿಂಗ್ ಆಗಿದೆ ಅನ್ನೋದು ಗೊತ್ತಾಗಿತ್ತು. ಗನ್‌ಮ್ಯಾನ್ ಗುರುಚರಣ್ ಸಿಂಗ್ ವಿರುದ್ಧವೇ ಪೊಲೀಸರು ಬೊಟ್ಟು ಮಾಡಿದ್ದರು. ಗುರುಚರಣ್ ಹಾರಿಸಿದ್ದ ಬುಲೆಟ್‌ಗೆ ರಾಜಶೇಖರ್ ಮೃತಪಟ್ಟಿದ್ದಾನೆ ಅನ್ನೋದನ್ನ ಪೊಲೀಸ್ ಮೂಲಗಳು ಖಚಿತಪಡಿಸಿವೆ.
ಗುಂಡು ಹಾರಿಸಿದ ಗುರುಚರಣ್ ಸಿಂಗ್ ಸೇರಿ ಒಟ್ಟು 26 ಮಂದಿ ಲಾಕ್!
ಜನವರಿ 1ರಂದು ನಡೆದಿದ್ದ ಗಲಭೆ ದಿನ ಶಾಸಕ ಭರತ್ ರೆಡ್ಡಿ ಆಪ್ತನ ಗನ್‌ಮ್ಯಾನ್‌ನಿಂದಲೇ ಫೈರಿಂಗ್ ಆಗಿದೆ ಅನ್ನೋದು ಗೊತ್ತಾಗಿದೆ. ಗನ್‌ಮ್ಯಾನ್‌ಗಳಾದ ಗುರುಚರಣ್ ಸಿಂಗ್, ಬಲ್ಜಿತ್ ಸಿಂಗ್ ಹಾಗೂ ಮಹೇಂದ್ರ ಸಿಂಗ್‌ನನ್ನು ಪೊಲೀಸರು ಹೆಡೆಮುರಿ ಕಟ್ಟಿದ್ದಾರೆ. ಅಷ್ಟೇ ಅಲ್ಲ ಗುರುಚರಣ ಸಿಂಗ್ ತಂಗಿದ್ದ ಎಂಆರ್‌ವಿ ಬಡಾವಣೆಯಲ್ಲಿರುವ ಮನೆಗೆ ಕರೆತಂದು ಮಹಜರೂ ಮಾಡಿದ್ದಾರೆ. ಈ ವೇಳೆ ಬುಲೆಟ್ ಕಾಟ್ರಿಜ್‌ಗಳನ್ನ ವಶಕ್ಕೆ ಪಡೆದಿದ್ದಾರೆ. ಅಲ್ಲದೆ ಜನಾರ್ದನ ರೆಡ್ಡಿ ನಿವಾಸದ ಬಳಿಯೂ ತಂದು ಮಹಜರು ಮಾಡಿದ್ದಾರೆ.
ಇನ್ನು ಬಳ್ಳಾರಿ ಬ್ಯಾನರ್ ಗಲಾಟೆ ಸಂಬಂಧ ಬ್ರೂಸ್‌ಪೇಟೆ ಠಾಣೆಯಲ್ಲಿ ಒಟ್ಟು 6 ಪ್ರಕರಣ ದಾಖಲಾಗಿವೆ. ಮೊನ್ನೆ 45 ಜನರನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದ್ದ ಪೊಲೀಸರು, ಕಾಂಗ್ರೆಸ್‌ನ 10, ಬಿಜೆಪಿಯ 11 ಕಾರ್ಯಕರ್ತರು ಸೇರಿದಂತೆ 26 ಜನರನ್ನು ಬಂಧಿಸಿದ್ದರು. ಕೇಸ್ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ವ್ಯಾಪ್ತಿಗೆ ಬರುವುದರಿಂದ 26 ಆರೋಪಿಗಳನ್ನು ಇಂದು ಕೋರ್ಟ್‌ಗೆ ಹಾಜರು ಪಡಿಸಿ ಇದೀಗ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

## ಜೋಳದ ಚಿಗುರು ಸೇವಿಸಿ ಕ್ಷಣಾರ್ಧದಲ್ಲಿ 50ಕ್ಕೂ ಹೆಚ್ಚು ಕುರಿಗಳ ಸಾವು!



ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ಪೆನ್ನೋಬನಹಳ್ಳಿ ಗ್ರಾಮದಲ್ಲಿ ಜೋಳದ ಚಿಗುರು ಸಿಪ್ಪೆ ಸೇವಿಸಿ 50ಕ್ಕೂ ಹೆಚ್ಚು ಕುರಿಗಳು ಸಾವನ್ನಪ್ಪಿವೆ. ಸೈನೆಡ್ ಅಂಶ ಇರುವ ಚಿಗುರು ವಿಷವಾಗಿ ಪರಿಣಮಿಸಿ ಕುರಿಗಳು ಮೃತಪಟ್ಟಿವೆ ಎಂದು ಪಶುವೈದ್ಯಾಧಿಕಾರಿಗಳು ತಿಳಿಸಿದ್ದಾರೆ. ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದ್ದು, ಕುರಿಗಾಹಿಗಳು ಮತ್ತು ರೈತರು ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸುವಂತೆ ಮನವಿ ಮಾಡಲಾಗಿದೆ.
ಲ್ಲೆಯ ಪಾವಗಡ ತಾಲೂಕಿನ ಪೆನ್ನೋಬನಹಳ್ಳಿ ಗ್ರಾಮದಲ್ಲಿ ಜೋಳದ ಚಿಗುರು ಸಿಪ್ಪೆ ಸೇವಿಸಿದ ಪರಿಣಾಮ ಕುರಿಗಳು ಸಾವನ್ನಪ್ಪಿರುವ ದುರ್ಘಟನೆ ಸಂಭವಿಸಿದೆ. ಗ್ರಾಮದ ಜಂಪಕ್ಕ ಎಂಬುವರಿಗೆ ಸೇರಿದ ಸುಮಾರು 200ಕ್ಕೂ ಅಧಿಕ ಕುರಿಗಳ ಹಿಂಡಿನಲ್ಲಿ 50ಕ್ಕೂ ಹೆಚ್ಚು ಕುರಿ ಮರಿಗಳು ಮೃತಪಟ್ಟಿವೆ.
ಲಕ್ಷಾಂತರ ರೂಪಾಯಿ ನಷ್ಟ
ಪ್ರತಿದಿನದಂತೆ ಮೊನ್ನೆ ಕುರಿಗಳನ್ನು ಮೇವಿಗಾಗಿ ಹೊಲದತ್ತ ಕರೆದೊಯ್ಯಲಾಗಿತ್ತು. ಎಂದಿನಂತೆ ಹುಲ್ಲು ಮೇಯುತ್ತಿದ್ದ ಕುರಿಗಳು, ಏಕಾಏಕಿ ಕುಸಿದು ಬೀಳತೊಡಗಿದ್ದು, ಕೆಲವೇ ಕ್ಷಣಗಳಲ್ಲಿ 50ಕ್ಕೂ ಹೆಚ್ಚು ಕುರಿಗಳು ಸಾವನ್ನಪ್ಪಿವೆ. ಇದರಿಂದ ಕುರಿಗಾಹಿಗೆ ಭಾರೀ ಆಘಾತವಾಗಿದ್ದು, ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.
ಜೋಳದ ಚಿಗುರು ಸಿಪ್ಪೆಯಲ್ಲಿ ಸೈನೆಡ್ ಅಂಶ
ವಿಷಯ ತಿಳಿಯುತ್ತಿದ್ದಂತೆ ಪಶುಪಾಲನಾ ಇಲಾಖೆಯ ವೈದ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದು, ಪರಿಶೀಲನೆಯ ವೇಳೆ ಕುರಿಗಳು ಜೋಳದ ಚಿಗುರು ಸಿಪ್ಪೆಯನ್ನು ಸೇವಿಸಿರುವುದು ಪತ್ತೆಯಾಗಿದೆ. ವೈದ್ಯಾಧಿಕಾರಿ ಅರ್ಕೆರಪ್ಪ ಅವರು, ಜೋಳದ ಚಿಗುರು ಸಿಪ್ಪೆಯಲ್ಲಿ ಸೈನೆಡ್ ಅಂಶ ಇರುವುದರಿಂದ ಅದು ವಿಷವಾಗಿ ಪರಿಣಮಿಸಿ ಕುರಿಗಳ ಸಾವಿಗೆ ಕಾರಣವಾಗಿದೆ ಎಂದು ತಿಳಿಸಿದ್ದಾರೆ.
ಘಟನೆಯ ಹಿನ್ನೆಲೆ ಕುರಿಗಳ ಮಾದರಿ ಸ್ಯಾಂಪಲ್‌ಗಳನ್ನು ವೈದ್ಯಕೀಯ ಪರೀಕ್ಷೆಗೆ ರವಾನಿಸಲಾಗಿದ್ದು, ಅಂತಿಮ ವರದಿ ನಿರೀಕ್ಷಿಸಲಾಗಿದೆ. ಇಂತಹ ದುರ್ಘಟನೆಗಳು ಮರುಕಳಿಸದಂತೆ ರೈತರು ಹಾಗೂ ಕುರಿಗಾಹಿಗಳು ಹೆಚ್ಚಿನ ಎಚ್ಚರಿಕೆ ವಹಿಸಬೇಕು ಎಂದು ಪಶು ವೈದ್ಯಾಧಿಕಾರಿಗಳು ಮನವಿ ಮಾಡಿದ್ದಾರೆ.

## ಆಧುನಿಕ ನಾಟಕವನ್ನು ಪ್ರಭಾವಿಸಿದ ಮಹನೀಯರಲ್ಲಿ ಕುವೆಂಪುರವರು ಅಗ್ರಗಣ್ಯರು



ಆಧುನಿಕ ನಾಟಕವನ್ನು ಪ್ರಭಾವಿಸಿದ ಮಹನೀಯರಲ್ಲಿ ವಿಶ್ವಮಾನವ ಕವಿ ಡಾ. ಕುವೆಂಪುರವರು ಅಗ್ರಗಣ್ಯರು. ಈ ಮಹಾಚೇತನ ಇತ್ತೀಚಿನ ಯುವಪೀಳಿಗೆಗೆ ವಿಶ್ವಮಾನವ ಪ್ರಜ್ಞೆಯ ಬೀಜಗಳನ್ನು ರೂಪಗೊಳಿಸುವ ಗುರುತರ ಪಾತ್ರ ಮಹತ್ವವಾದದ್ದು ಎಂದು ಹಾಸ್ಯ ಭಾಷಣಕಾರರಾದ ಶ್ರೀಮತಿ ಸುಧಾ ಬರಗೂರು ಅಭಿಪ್ರಾಯಪಟ್ಟರು.
02-01-2026ರಂದು ಕುವೆಂಪು ನಗರದ, ಕುವೆಂಪು ನಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕುವೆಂಪುರವರ 121ನೇ ಜನ್ಮದಿನೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಶೇಷ ಉಪನ್ಯಾಸ ನೀಡಿದರು.
ಕಾರ್ಯ ಕ್ರಮದ ಉದ್ಘಾಟನೆಯನ್ನು ನಗರ ಶಾಸಕರಾದ ಶ್ರೀ ಜಿ.ಬಿ.ಜ್ಯೋತಿಗಣೇಶ್ ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಶುಭ ಕೋರಿದರು.
ಕಾರ್ಯಕ್ರಮದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳ ತಾಂತ್ರಿಕ ಸಲಹೆಗಾರರು ಹಾಗೂ ಕರ್ನಾಟಕ ಸರ್ಕಾರದ ಜಲಸಂಪನ್ಮೂಲ ಇಲಾಖೆ ನಿವೃತ್ತ ಕಾರ್ಯದರ್ಶಿಗಳಾದ ಶ್ರೀ ಕೆ.ಜೈಪ್ರಕಾಶ್ ಕುವೆಂಪು ನಗರ ಬಡಾವಣೆಯ ಅಭಿವೃದ್ಧಿಯ ಕಿರುಪರಿಚಯವನ್ನು ಪ್ರಾತ್ಯಕ್ಷಿಕೆ ಮೂಲಕ ಪ್ರಸ್ತುತಪಡಿಸಿದರು.
ಕಾರ್ಯಕ್ರಮದಲ್ಲಿ ಕುವೆಂಪು ನಗರದ ನಾಗರೀಕರಾದ ಬಯೋನೀಡ್ಸ್ ಕಂಪನಿಯ ಮಾಲೀಕರಾದ ಡಾ|| ವಿನಯ್ ಬಾಬು, ಎಂ.ಎಸ್.ನಾಗರಾಜು (ಅಪ್ಪಾಜಿ), ಹೋಟೆಲ್ ಉದ್ದಿಮೆದಾರರಾದ ಶ್ರೀ ದೇವೇಂದ್ರಪ್ಪ ಹಾಗೂ ತುಮಕೂರು ಮಹಾನಗರ ಪ್ರತಿಷ್ಠಿತ ಜವಳಿ ಅಂಗಡಿ ಕಾವೇರಿ ಸಿಲ್ಕ್ಸ್ ಮತ್ತು ಸ್ಯಾರೀಸ್‌ನ ಮಾಲೀಕರಾದ ಶ್ರೀ ರಾಜಶೇಖರ್‌ರವರನ್ನು ವಿಶೇಷವಾಗಿ ಸನ್ಮಾನ ಮಾಡಲಾಯಿತು. ಬಡಾವಣೆಯ ಸದಸ್ಯರ ಮಕ್ಕಳಿಗೆ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಎರಡನೇ ವರ್ಷದ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಹೊಂದಿದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೌರವಾಧ್ಯಕ್ಷರಾದ ಶ್ರೀ ಕೆ.ಬಸವನಗೌಡರು ವಹಿಸಿದ್ದರು.
ಈ ಕಾರ್ಯಕ್ರಮದಲ್ಲಿ ಶ್ರೀ ಜಿ.ವಿ.ಶ್ರೀನಿವಾಸ್, ಅಧ್ಯಕ್ಷರು, ಆರ್.ಎಸ್.ಚಂದ್ರಶೇಖರರಾವ್, ಕಾರ್ಯದರ್ಶಿ, ವಿಶ್ವನಾಥಸ್ವಾಮಿ, ಕೋಶಾಧ್ಯಕ್ಷರು, ಸಂಘಟನಾ ಕಾರ್ಯದರ್ಶಿ ರಾಜಶೇಖರ್, ಮಹಲಿಂಗಪ್ಪ, ರಾಜಣ್ಣ, ತಿಮ್ಮಪ್ಪ, ವೆಂಕಟೇಶ್, ರಂಗನಾಥ, ಮಹೇಶ್, ಗುಂಡಪ್ಪ, ಗೋವಿಂದರಾಜು, ಎಂ.ಎಸ್.ನಾಗರಾಜು ಉಪಸ್ಥಿತರಿದ್ದರು.

## ಶುದ್ಧ ಕುಡಿಯುವ ನೀರು ಬಳಸುವಂತೆ 2000 ಕ್ಕೂ ಹೆಚ್ಚು ನೀರಿನ ಕ್ಯಾನ್ ವಿತರಣೆ.

ಶಿರಾ : ತಾಲೂಕಿನ ಶಾಸಕರು ಹಾಗೂ ಮಾಜಿ ಸಚಿವರಾದ ಮರೆಯಲಾಗದ ಮಾಣಿಕ್ಯ ದಿ. ಬಿ.ಸತ್ಯನಾರಾಯಣ ಅವರು ಹಾಕಿ ಕೊಟ್ಟಿರುವ ಮಾರ್ಗದರ್ಶನದಲ್ಲಿ ನಡೆಯುತ್ತೇನೆ. ರಾಜ್ಯದಲ್ಲಿ ಜೆಡಿಎಸ್ ಪಕ್ಷ ಅಧಿಕಾರಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ಪುನೀತ್ ಗೌಡ ಹೇಳಿದರು.
ಅವರು ನಗರದಲ್ಲಿ ಪುನೀತ್ ಗೌಡ ಬ್ರಿಗೇಡ್ ಹಾಗೂ ಅಭಿಮಾನಿಗಳು ಏರ್ಪಡಿಸಿದ್ದ ಪುನೀತ್ ಗೌಡ ಅವರ ಹುಟ್ಟು ಹಬ್ಬ ಆಚರಣೆಯಲ್ಲಿ ಭಾಗವಹಿಸಿ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಸುಮಾರು 2000 ಕ್ಕೂ ಹೆಚ್ಚು ಕುಡಿಯುವ ನೀರಿನ ಕ್ಯಾನ್‌ಗಳನ್ನು ವಿತರಿಸಿ ಮಾತನಾಡಿದರು.
ತಾಲ್ಲೂಕಿನಲ್ಲಿ ಜನತೆ ತಮ್ಮ ಆರೋಗ್ಯದ ದೃಷ್ಟಿಯಿಂದ ಶುದ್ಧ ಕುಡಿಯುವ ನೀರನ್ನು ಬಳಸುವುದರ ಮೂಲಕ ಬಹುತೇಕ ಅನಾರೋಗ್ಯ ಬಾರದಂತೆ ತಡೆಗಟ್ಟಬಹುದು, ಮನುಷ್ಯನಿಗೆ ಜೀವಿಸಲು ಅತೀ ಮುಖ್ಯವಾಗಿ ಬೇಕಿರುವುದು ಶುದ್ಧ ಗಾಳಿ, ನೀರು ಹಾಗೂ ಆಹಾರ, ಈ ಎಲ್ಲಾವನ್ನು ಗಮನದಲ್ಲಿಟ್ಟುಕೊಂಡು ಇಂದು ಕುಡಿಯುವ ನೀರಿನ ಕ್ಯಾನ್ ವಿತರಣೆ ಮಾಡುವುದರ ಮೂಲಕ ನನ್ನ ಹುಟ್ಟಿಹಬ್ಬಕ್ಕೆ ನನ್ನ ಅಭಿಮಾನಿಗಳು ನಿಜಾರ್ಥ ನೀಡಿದ್ದಾರೆಎಂದರು, ಶಿರಾ ತಾಲೂಕಿನಲ್ಲಿ ದಿ. ಬಿ.ಸತ್ಯನಾರಾಯಣ ಅವರು ಸಾವಿರಾರು ಜನರಿಗೆ ಹಕ್ಕುಪತ್ರ ನೀಡಿದ ಮಹಾನ್ ನಾಯಕರು. ಎಲ್ಲಾ ಜಾತಿ ಜನಾಂಗದವರನ್ನು ರಾಜಕೀಯವಾಗಿ ಬೆಳೆಸಿದವರು. ಅವರ ಅವಧಿಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಆದ್ದರಿಂದ ಅವರ ಪುತ್ಥಳಿಯನ್ನು ನಿರ್ಮಿಸಲು ನಗರಸಭೆ ವತಿಯಿಂದ ಸ್ಥಳವಕಾಶ ನೀಡಬೇಕು. ಅದಕ್ಕೆ ನಗರ ಸಭೆ ಪೌರಾಯುಕ್ತರಿಗೆ ಮನವಿ ಮಾಡುವುದಾಗಿ ತಿಳಿಸಿದರು. ಇಂದು ನನ್ನ ಹುಟ್ಟು ಹಬ್ಬವನ್ನು ಸಮಾಜಮುಖಿ ಕೆಲಸ ಮಾಡುವುದರ ಮೂಲಕ ಅದ್ದೂರಿಯಾಗಿ ಆಚರಿಸಿದ ಎಲ್ಲರಿಗೂ ನಾನು ಋಣಿಯಾಗಿರುತ್ತೇನೆ. ನನ್ನ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಂಡು ಹೋಗುತ್ತೇನೆ ಎಂದರು.
ತಾಲೂಕು ಜೆಡಿಎಸ್ ಅಧ್ಯಕ್ಷ ಸತ್ಯಪ್ರಕಾಶ್ ಮಾತನಾಡಿ ಯುವ ನಾಯಕ ಪುನೀತ್ ಗೌಡ ಅವರು ತಮ್ಮ ಶಕ್ತಿ ಮೀರಿ ಸಮಾಜ ಸೇವೆ ಮಾಡುತ್ತಿದ್ದಾರೆ. ಎಲ್ಲರ ಆರ್ಶೀವಾದ ಅವರ ಮೇಲಿರಲಿ ಎಂದರು.
ಕಾರ್ಯಕ್ರಮದಲ್ಲಿ ಮಾಜಿ ಜಿ.ಪಂ. ಉಪಾಧ್ಯಕ್ಷ ಮುದಿಮಡು ರಂಗಶಾಮಯ್ಯ, ಮುಖಂಡರಾದ ಕಲ್ಕೆರೆ ರವಿಕುಮಾರ್, ನೇಜಂತಿ ಅಭಿಲಾಷ್ ಗೌಡ, ಎಂಜಲಗೆರೆ ತಿಪ್ಪೇಸ್ವಾಮಿ, ರಾಮಕೃಷ್ಣ, ಮುದ್ದುಗಣೇಶ್, ಮಲ್ಲೇಗೌಡ, ಬಪ್ಪಣ್ಣ, ರಂಗನಾಥ ಗೌಡ, ಬೊಮ್ಮಗಾನಹಳ್ಳಿ ಮೋಹನ್, ಹುಲಿಕುಂಟೆ ಪ್ರವೀಶ್, ಶಶಾಂಕ್, ಕಲ್ಲಹಳ್ಳಿ ಉಮೇಶ್, ರಾಮು, ಚೇತನ್ ಬರಗೂರು, ಕಿರಣ್, ಹರ್ಷ ಪಟೇಲ್ ಸೇರಿದಂತೆ ಹಲವರು ಹಾಜರಿದ್ದರು.

## ಜ.1ರಂದು ಭೀಮ ಕೋರೆಗಾಂವ್ ಯುದ್ಧದ ವಿಜಯೋತ್ಸವ



ಮಧುಗಿರಿ: ಜನವರಿ 1ರಂದು ಭೀಮ ಕೋರೆಗಾಂವ್ ಯುದ್ಧದ ವಿಜಯೋತ್ಸವವನ್ನು ದೇಶದಾದ್ಯಂತ ಶೋಷಿತ ಸಮುದಾಯಗಳು ಆಚರಣೆ ಮಾಡುತ್ತಿವೆ. ಎಸ್‌ಸಿ, ಎಸ್‌ಟಿ ಹಾಗೂ ಹಿಂದುಳಿದ ವರ್ಗದವರ ಪ್ರತಿ ಗ್ರಾಮದಲ್ಲಿ ಭೀಮ ಕೋರೆಗಾಂವ್ ಯುದ್ಧದ ವಿಜಯೋತ್ಸವದ ಚರಿತ್ರೆಯನ್ನು ಜನರಿಗೆ ತಿಳಿಸಬೇಕು ಎಂದು ದ.ಸಂ.ಸ ಜಿಲ್ಲಾ ಸಂಚಾಲಕ ದೊಡ್ಡೇರಿ ಕಣಿಮಯ್ಯ ತಿಳಿಸಿದರು
ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿರುವ ಡಾ.ಬಿ.ಆರ್ ಅಂಬೇಡ್ಕರ್ ಪುತ್ಥಳಿ ಬಳಿ ಸಮಾಜಕಲ್ಯಾಣ ಇಲಾಖೆ ಹಾಗೂ ದಲಿತಪರ ಸಂಘಟನೆಗಳ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಭೀಮ ಕೋರೆ ಗಾಂವ್ ಯುದ್ಧದ ವಿಜಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಶೋಷಿತರ ಶೌರ್ಯದ ಸಂಕೇತವೇ ಕೋರೆಗಾಂವ್ ಯುದ್ಧವಾಗಿದೆ ಭೀಮಾ ನದಿ ದಡದಲ್ಲಿ ಪೇಶ್ವೆ ಸೇನೆ ಹಾಗೂ ಮಹಾರ್ ಸೈನಿಕರ ಮಧ್ಯೆ ನಡೆದ ಯುದ್ದದಲ್ಲಿ ಮಹರ್ ಸೈನಿಕರು ಶೌರ್ಯ ಮೆರೆದಿದ್ದಾರೆ 30 ಸಾವಿರ ಪೇಶ್ವೆಗಳನ್ನು 500 ಮಹಾರ್ ಸೈನಿಕರು ಸೋಲಿಸಿ ವಿಜಯಪತಾಕೆ ಹಾರಿಸಿದ ದಿನವನ್ನು ಕೋರೆಗಾಂವ್ ವಿಜಯೋತ್ಸವವಾಗಿ ದೇಶಾದ್ಯಂತ ಆಚರಣೆ ಮಾಡಲಾಗುತ್ತಿದೆ. ಪೇಶ್ವೆಗಳ ಆಡಳಿತದಲ್ಲಿದ್ದ ಜಾತಿ, ಅಸ್ಪೃಶ್ಯತೆ, ಮೇಲುಕೀಳುಗಳ ವಿರುದ್ಧ ನಿಂತು ಮಾನವೀಯ ಮೌಲ್ಯಗಳನ್ನು ಪಡೆದು ಕೊಳ್ಳಲು ಹಂಬಲಿಸುವ ಮಹಾರ್ ಸೈನಿಕರ ಧೈರ್ಯ ಸಾಹಸ, ಕೆಚ್ಚೆದೆಯ ಹೋರಾಟವಾಗಿದ್ದು ಇದು ಅಸ್ಪೃಶ್ಯತೆಯ ವಿರುದ್ದ ಸಮಾನತೆಗಾಗಿ ನಡೆದ ಯುದ್ಧವಾಗಿದ್ದು ಇಂತಹ ಇತಿಹಾಸಗಳನ್ನು ತಿಳಿಯಬೇಕಿದೆ ಎಂದರು.
ದ.ಸಾ. ಪ ತಾಲ್ಲೂಕು ಅಧ್ಯಕ್ಷ ಮಹರಾಜು ಮಾತನಾಡಿ ದಲಿತರ ಸ್ವಾಭಿಮಾನದ ಪ್ರತೀಕ, ದಲಿತರ ಅಸ್ಮಿತೆಯ ಸಂಕೇತವಾಗಿರುವ ಭೀಮಾ ಕೋರೇಗಾಂವ್ ವಿಜಯೋತ್ಸವವನ್ನು ಇಂದಿನ ಯುವ ಪೀಳಿಗೆ ತಿಳಿಯಬೇಕಿದೆ ಕೋರೆಗಾಂವ್ ಯುದ್ದದ ಇತಿಹಾಸವನ್ನು ಈ ದೇಶದ ಮೇಲ್ವರ್ಗದ ಪರವಾಗಿರುವ ಇತಿಹಾಸಕಾರರು ಮರೆಮಾಚಿದ್ದರು ಅಂಬೇಡ್ಕರ್ ಅವರು ಮಹಾರ್ ಇತಿಹಾಸವನ್ನು ಅಧ್ಯಯನ ಮಾಡುವ ಸಮಯದಲ್ಲಿ ಕೋರೆಗಾಂವ್ ಯುದ್ದದ ಇತಿಹಾಸವನ್ನು ತಿಳಿದು ಅದನ್ನು ಇಡೀ ಜಗತ್ತಿಗೆ ತಿಳಿಸದರು ಕೋರೆಗಾಂವ್ ಯುದ್ದದಲ್ಲಿ 30 ಸಾವಿರ ಪೇಶ್ವೆ ಸೈನಿಕರನ್ನು ಸೋಲಿಸಿದ 500 ಮಹಾರ್ ಸೈನಿಕರ ಪೈಕಿ 22 ಮಂದಿ ಸೈನಿಕರು ಮರಣ ಹೊಂದುತ್ತಾರೆ. ಅವರ ನೆನಪಿಗಾಗಿ ಭೀಮನದಿ ತೀರದಲ್ಲಿ ವಿಜಯಸ್ಥಂಭ ಸ್ಥಾಪಿಸಲಾಗಿದ್ದು, ಪ್ರತಿವರ್ಷ ಕೋರೆಗಾಂವ್‌ಗೆ ಜನವರಿ1ರಂದು ಸುಮಾರು 5 ಲಕ್ಷದಿಂದ 6 ಲಕ್ಷದವರಗೆ ಜನರು ಸೇರಿ ಇತಿಹಾಸದ ಸಂಕೇತವಾದ ಈ ದಿನವನ್ನು ಸ್ಮರಿಸುತ್ತಾರೆ ಎಂದರು.
ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿಯ ಎಸ್.ಕೆ.ರಂಗನಾಥ್, ಎಂ.ವೈ.ಶಿವಕುಮಾರ್, ಪತ್ರಕರ್ತರ ಸಂಘದ ಅಧ್ಯಕ್ಷ ವಿ.ಹೆಚ್. ಚಂದ್ರ ಕಾಂತ್, ಕೆಪಿಸಿಸಿ ಶಿಕ್ಷಕರ ಘಟಕದ ಜಿಲ್ಲಾಧ್ಯಕ್ಷ ವೆಂಕಟರಾಮು, ಸಮಾಜ ಕಲ್ಯಾಣ ಇಲಾಖೆಯ ವ್ಯವಸ್ಥಾಪಕ ರಾಮ್ ಪ್ರಸಾದ್, ಮಹೇಶ್,ಮನೋಜ್ ಇನ್ನಿತರರು ಇದ್ದರು.

## ರಾಮಕೃಷ್ಣಆಶ್ರಮದ33ನೇವಾರ್ಷಿಕೋತ್ಸವ




ತುಮಕೂರು– ರಾಮಕೃಷ್ಣ ನಗರದ ರಾಮಕೃಷ್ಣ ವಿವೇಕಾನಂದ ಆಶ್ರಮ 1992ರಲ್ಲಿ ಸ್ಥಾಪನೆಗೊಂಡು ಇದೀಗ ತನ್ನ 33ನೇ ವಾರ್ಷಿಕೋತ್ಸವ ಸಂಭ್ರಮಾಚರಣೆಗೆ ಸನ್ನದ್ದಗೊಂಡಿದ್ದು ಜ.10 ಮತ್ತು 11 ರಂದು ಆಶ್ರಮದ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಕಾರ್ಯ ಕ್ರಮ ಆಯೋಜನೆಗೊಂಡಿರುವುದಾಗಿ ಅಧ್ಯಕ್ಷರಾದ ಡಾ. ಶ್ರೀ ವಿರೇಶಾನಂದಸರಸ್ವತಿ ಸ್ವಾಮೀಜಿಗಳು ತಿಳಿಸಿದರು.
ಆಶ್ರಮದಲ್ಲಿ ಇಂದು ಬೆಳಿಗ್ಗೆ ಸುದ್ದಿ ಗೋಷ್ಠಿ ನಡೆಸಿ ಮಾತನಾಡಿ, ಜ.10 ರಂದು ಬೆಳಿಗ್ಗೆ 10.30ಕ್ಕೆ ಶ್ರೀಮಾತೆ ಶಾರದಾದೇವಿ ಜನ್ಮದಿನೋತ್ಸವದ ಅಂಗವಾಗಿ 26ನೇ ವರ್ಷದ ಜೀವಂತ ದುರ್ಗಪೂಜೆ ಕಾರ್ಯ ಕ್ರಮ ಏರ್ಪಟಿದ್ದು 200 ಅಶಕ್ತ ತಾಯಂದಿರಿಗೆ ಅನ್ನದಾನ, ಧಾನ್ಯ ದಾನ, ವಸ್ತ್ರದಾನಗಳಿಂದ ಸತ್ಕರಿಸಲಾಗುವುದು ಎಂದರು.
ಹೆಸರಾಂತ ಕ್ಯಾನ್ಸರ್ ಚಿಕಿತ್ಸಕರಾದ ಡಾ. ವಿಜಯಲಕ್ಷ್ಮಿ ?ಮ ದೇಶಮಾನೆ ಕಾರ್ಯ ಕ್ರಮ ಉದ್ಘಾಟಿಸುವರು. ಹೆಸರಾಂತ ಅರ್ಥ ತಜ್ಞ ಮೂಕನಹಳ್ಳಿ ರಂಗಸ್ವಾಮಿ, ಹೆಸರಾಂತ ಉದ್ಯಮಿ ವೀರಭದ್ರ ಬ್ಯಾಡಗಿ, ಸಮಾಜ ಸೇವಕಿ ಶಿಲ್ಪ ಬ್ಯಾಡಗಿ ಭಾಗವಹಿಸುವರು. ಅಂದು ಸಂಜೆ 5.30ಕ್ಕೆ ಆಶ್ರಮದ ಶ್ರೇಯಸ್ಸಿಗೆ ಶ್ರಮಿಸಿದ ಸೇವಾಕರ್ತರಿಗೆ ಪುರಸ್ಕಾರ ನೀಡಲಾಗುವುದು.
ಜ.11 ರಂದು ಬೆಳಿಗ್ಗೆ 10 ಗಂಟೆಗೆ ರಾಜ್ಯಮಟ್ಟದ ಯುವ ಸಮ್ಮೇಳನ ಆಯೋಜಿಸಲಾಗಿದ್ದು, ಕರ್ನಾಟಕ ಉಚ್ಚನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಪಿ.ಕೃಷ್ಣಭಟ್ ಉದ್ಘಾಟಿಸಿ, ಬಲಿಷ್ಠ ಭಾರತ ನಿರ್ಮಾತೃಗಳಾಗಿ ಯುವಜನತೆ ಎಂಬ ವಿಷಯ ಕುರಿತು ದಿಕ್ಸೂಚಿ ಭಾಷಣ ಮಾಡುವರು. ರಾಜ್ಯ ಆರೋಗ್ಯ ಇಲಾಖೆ ನಿವೃತ್ತ ಕಾರ್ಯದರ್ಶಿ ಕೆ.ಹೆಚ್.ಗೋಪಾಲಕೃಷ್ಣೇಗೌಡ ಭಾಗವಹಿಸುವರು. ಇದೇ ಸಂದರ್ಭದಲ್ಲಿ ವಿವೇಕಾ ವಿದ್ಯಾರ್ಥಿ ಲಿಖಿತ ಪರೀಕ್ಷೆಯಲ್ಲಿ ರ?ಯಾಂಕ್ ವಿಜೇತರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.
ಸ್ವಾಮಿ ಧೀರಾನಂದಜೀ, ಸ್ವಾಮಿ ಪರಮಾನಂದಜೀ, ಕುಮಾರಸ್ವಾಮಿ, ಪ್ರಸನ್ನ ಮುಂತಾದವರು ಸುದ್ದಿಗೋಷ್ಠಿಯಲ್ಲಿದ್ದರು.

# ಒತ್ತಡ, ಹಣದುಬ್ಬರದ ಜೀವನ; ಕುಸಿಯುತ್ತಿದೆ ಜನನ ಪ್ರಮಾಣ!

ಇವತ್ತಿನ ದಿನದಲ್ಲಿ 800 ಕೋಟಿಗೂ ಹೆಚ್ಚು ಜನರಿದ್ದಾರೆ ಅದರಲ್ಲಿ 10 ಪ್ರತಿಶತ ಜನರಿಗೆ ಮಾತ್ರ ಜಗತ್ತಿನ ಆಗುಹೋಗುಗಳ ಅರಿವಿದೆ. ಈ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಜನ ತುಂಬಿ ತುಳುಕುತ್ತಿದ್ದಾರೆ ಎನ್ನಿಸುತ್ತದೆ. ಒಂದು ಕೆಲಸಕ್ಕೆ ನೂರಾರು ಅರ್ಜಿಗಳು ಬರುತ್ತವೆ. ಸ್ಪರ್ಧೆ ಬಹಳ ಹೆಚ್ಚು ಎನ್ನಿಸುತ್ತದೆ. ಬದುಕಿನ ಗುಣಮಟ್ಟ ಹೆಚ್ಚಿಸಿಕೊಳ್ಳುವ ಬದಲು ನಾವು ಬೇಕಿಲ್ಲದ ವಿಷಯಗಳ ಬಗ್ಗೆ ಮಾತ್ರ ಗಮನ ಹರಿಸುತ್ತಿದ್ದೇವೆ. 1950 ರ ಸುಮಾರಿಗೆ ಎರಡೂವರೆ ಬಿಲಿಯನ್ ಅಂದರೆ 250 ಕೋಟಿ ಇದ್ದ ಜಾಗತಿಕ ಜನಸಂಖ್ಯೆ ಇಂದು 8 ಬಿಲಿಯನ್ ಅಂದರೆ 800 ಕೋಟಿಗೂ ಮೀರಿದೆ. ಅದಕ್ಕೆ ತಕ್ಕ ಹಾಗೆ ತಂತ್ರಜ್ಞಾನ, ಕೈಗಾರಿಕೆ, ಕೃಷಿ ಎಲ್ಲಾ ಕ್ಷೇತ್ರದಲ್ಲೂ ಬಹಳಷ್ಟು ಅಭಿವೃದ್ಧಿಯಾಗಿದೆ. ಹೀಗಿದ್ದೂ ಜಗತ್ತಿನ ಎಲ್ಲಾ ಜನರಿಗೂ ಕೆಲಸ ಕೊಡುವುದು ಸಾಧ್ಯವಿಲ್ಲದ ಮಾತು. ಕೆಲಸ ಸೃಷ್ಟಿಯಾಗುತ್ತಿಲ್ಲ ಎನ್ನುವ ಕೂಗನ್ನು ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ ಪೂರ್ಣವಾಗಿ ಇಲ್ಲವಾಗಿಸುತ್ತದೆ. ಯಾರೆಲ್ಲಾ ಜಗತ್ತಿನ ಬದಲಾವಣೆಗಳಿಗೆ ಹೊಂದಿಕೊಂಡು ವೇಗವಾಗಿ ಬದಲಾಗುತ್ತಾರೆ ಅವರಿಗೆ ಮಾತ್ರ ಕೆಲಸವಿರುತ್ತದೆ. ಉಳಿದವರ ಬದುಕು ಹೇಗಿರಬಹುದು? ಮುಂದಿನ ಭವಿಷ್ಯ ಹೇಗಿರಬಹುದು? ತಂತ್ರಜ್ಞಾನದ ಸಹಾಯದಿಂದ ಬಹುತೇಕ ಕೆಲಸಗಳಿಗೆ ಮನುಷ್ಯರ ಶ್ರಮ ಬೇಕಿಲ್ಲದೆ ಹೋಗುತ್ತದೆ. ಆಗ ಎಲ್ಲರ ಹೊಟ್ಟೆಗೂ ಆಹಾರವನ್ನು ಖಂಡಿತ ಶಕ್ತಿ ತಂತ್ರಜ್ಞಾನ ನೀಡುತ್ತದೆ. ಆದರೆ ಮನುಷ್ಯನ ಬದುಕಿಗೊಂದು ಉದ್ದೇಶವನ್ನು ನೀಡುವುದಿಲ್ಲ. ಆ ಉದ್ದೇಶವನ್ನು ನಾವೇ ಕಂಡುಕೊಳ್ಳಬೇಕು.

ಇವತ್ತಿನ ದಿನದಲ್ಲಿ 800 ಕೋಟಿಗೂ ಹೆಚ್ಚು ಜನರಿದ್ದಾರೆ ಅದರಲ್ಲಿ 10 ಪ್ರತಿಶತ ಜನರಿಗೆ ಮಾತ್ರ ಜಗತ್ತಿನ ಆಗುಹೋಗುಗಳ ಅರಿವಿದೆ. ಮಿಕ್ಕವರು ಲೆಕ್ಕದಲ್ಲಿ ಮಾತ್ರ ದಾಖಲಾಗುತ್ತಾರೆ. ಇವತ್ತಿನ ಕೆಲಸಗಾರರ ಬಗ್ಗೆ ಒಂದು ಜೋಕ್ ಪ್ರಸಿದ್ಧವಾಗಿದೆ. ಮೊದಲಿಗೆ ಕೆಲಸ ಮಾಡಲು ಜನರು ಸಿಗುತ್ತಿಲ್ಲ ಎನ್ನುವ ಕೂಗಿದೆ. ಎರಡನೆಯದಾಗಿ ಜನರಿಗೆ ಕೆಲಸವೇ ಸಿಗುತ್ತಿಲ್ಲ ಎಂದು ಎಲ್ಲಾ ದೇಶಗಳಲ್ಲೂ ಆ ದೇಶದ ಸರಕಾರವನ್ನು ದೂಷಿಸಲಾಗುತ್ತದೆ. ಮೂರನೆಯದಾಗಿ ಕೆಲಸಕ್ಕೆ ಇರುವ ಜನರಿಗೆ ತಾವು ಮಾಡುವ ಕೆಲಸದ ಬಗ್ಗೆ ಜ್ಞಾನವೇ ಇರುವುದಿಲ್ಲ. ಇದು ಜೋಕ್ ಎನ್ನಿಸುತ್ತದೆ. ಆದರೆ ಜಗತ್ತು ಇಂದು ಎದುರಿಸುತ್ತಿರುವ ಮಹಾನ್ ಸಮಸ್ಯೆಯಿದು.

ಇದರ ಜೊತೆಗೆ ಇನ್ನೊಂದು ಮಹಾನ್ ಸಮಸ್ಯೆಯಲ್ಲಿ ಜಗತ್ತು ಸಿಕ್ಕಿ ಹಾಕಿಕೊಂಡಿದೆ. ಅದು ಮೇಲಿನ ಸಮಸ್ಯೆಗೆ ನೇರವಾಗಿ ಸಂಬಂಧಿಸಿದ್ದು. ಜಗತ್ತಿನಲ್ಲಿ ಕೌಶಲ ಹೊಂದಿರುವ ಕೆಲಸಗಾರರ ಸಂಖ್ಯೆ ತೀವ್ರವಾಗಿ ಕಡಿಮೆಯಾಗಿದೆ. ಸ್ಕಿಲ್ ಇರುವ ಜನರು ಜಗತ್ತಿನ ಯಾವ ಭಾಗದಲ್ಲಿ ಬೇಕಾದರೂ ಕೆಲಸ ಮಾಡಬಹುದು ಎನ್ನುವ ಪರಿಕಲ್ಪನೆಯಿಂದ ಬಹಳಷ್ಟು ಜನ ತಮ್ಮ ದೇಶಗಳನ್ನು ಬಿಟ್ಟು ಬೇರೆ ದೇಶಗಳಲ್ಲಿ ಬದುಕನ್ನು ಕಟ್ಟಿಕೊಂಡರು. ಇದೀಗ ಹೀಗೆ ವಲಸೆ ಬಂದವರನ್ನು ಕೆಲಸ ಕದಿಯಲು ಬಂದವರು ಎನ್ನುವಂತೆ ನೋಡಲಾಗುತ್ತಿದೆ. ಪ್ರತಿ ದೇಶವೂ ನಮ್ಮ ದೇಶ ಮೊದಲು ಎನ್ನುವ ರಾಷ್ಟ್ರೀಯವಾದಕ್ಕೆ ಹೊರಳಿ ಕೊಳ್ಳುತ್ತಿವೆ. ಇದನ್ನು ತಪ್ಪು ಎಂದು ಹೇಳಲು ಹೋಗುತ್ತಿಲ್ಲ. ಯಾರೆಲ್ಲಾ ನಮ್ಮ



ದೇಶ, ನಮ್ಮ ಐಡೆಂಟಿಟಿ ಎನ್ನುತ್ತಿದ್ದಾರೆ ಅವರ ಗುರುತು, ಅವರ ಸಂಸ್ಕೃತಿ ಹೆಚ್ಚು ವರ್ಷಗಳ ಉಳಿಯುವುದಿಲ್ಲ. ಜಗತ್ತು ಬದಲಾಗಿ ಹೋಗಲಿದೆ ಎನ್ನುವುದನ್ನು ತಿಳಿಸುವುದು ಈ ಲೇಖನದ ಉದ್ದೇಶ. ಒಂದು ಸಮುದಾಯ ಅಥವಾ ದೇಶ ಅದೇ ದೇಶ ಅಥವಾ ಸಮುದಾಯವಾಗಿ ಉಳಿದುಕೊಳ್ಳಬೇಕು ಎಂದರೆ ಫರ್ಟಿಲಿಟಿ ಸಂಖ್ಯೆ 2.1 ಇರಬೇಕು. ಅಂದರೆ ಸ್ಪೇನ್ ದೇಶದಲ್ಲಿ ಸ್ಪಾನಿಶರು ಉಳಿದುಕೊಳ್ಳಬೇಕು ಎಂದರೆ ಪ್ರತಿ ದಂಪತಿಗಳು ಎರಡು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳನ್ನು ಮಾಡಿಕೊಳ್ಳಬೇಕು. ಹೀಗೆ ಫರ್ಟಿಲಿಟಿ ರೇಟ್ ಎರಡಕ್ಕಿಂತ ಕಡಿಮೆಯಾದಾಗ ನಿಧಾನವಾಗಿ ಆ ದೇಶದಲ್ಲಿ ವಲಸಿಗರು ನೆಲೆ ನಿಲ್ಲಲು ಶುರು ಮಾಡುತ್ತಾರೆ. ಯಾವುದು ನನ್ನದು ಎಂದು ಹೋರಾಡುತ್ತಿದ್ದಾರೆ ಅದು ಇನ್ನು 25 ವರ್ಷದಲ್ಲಿ ಅವರ ಕೈ ತಪ್ಪಿ ಹೋಗಲಿದೆ. ಡೆಮೊಗ್ರಾಫಿ ಹೇಗೆ ಬದಲಾಗುತ್ತದೆ ಎನ್ನುವುದನ್ನು ನೋಡೋಣ.

ಮೊದಲಿಗೆ ಕರ್ನಾಟಕದಿಂದ ಶುರು ಮಾಡೋಣ. ಕರ್ನಾಟಕದಲ್ಲಿ ಫರ್ಟಿಲಿಟಿ ರೇಟ್ 1.5 ಇದೆ. ಅಂದರೆ ಕನ್ನಡಿಗರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕುಸಿತ ಕಾಣುತ್ತ ಹೋಗುತ್ತದೆ. ಕನ್ನಡಿಗರ ಅಸ್ಮಿತೆ, ಸಂಸ್ಕಾರ ಉಳಿದುಕೊಳ್ಳಬೇಕು ಎಂದರೆ ಕನಿಷ್ಠ ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಕನ್ನಡಿಗ ದಂಪತಿಗಳು ಮಾಡಿಕೊಳ್ಳಬೇಕು. ಇದಾಗುತ್ತಿಲ್ಲ. ವರ್ಷದಿಂದ ವರ್ಷಕ್ಕೆ ನಮ್ಮ ಫರ್ಟಿಲಿಟಿ ರೇಟ್ ಅಂದರೆ ಕನ್ನಡ ಮಕ್ಕಳು ಹುಟ್ಟುವ ಸಂಖ್ಯೆ ತೀವ್ರವಾಗಿ ಕುಸಿಯುತ್ತಿದೆ.

ದಕ್ಷಿಣ ಭಾರತದ ಎಲ್ಲಾ ರಾಜ್ಯಗಳು ಕೂಡ ಅಸ್ಮಿತೆ ಕಾಪಾಡಿಕೊಳ್ಳಲು ಬೇಕಾಗುವ 2.1 ಫರ್ಟಿಲಿಟಿ ರೇಟ್‌ಗಿಂತ ಬಹಳ ಕಡಿಮೆಯಿದೆ. ಅದೇ ಸಮಯದಲ್ಲಿ ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ ರಾಜ್ಯಗಳಲ್ಲಿ ಈ ಸಂಖ್ಯೆ 2.5 ಕ್ಕಿಂತ ಹೆಚ್ಚಿದೆ. ಇದರರ್ಥ ಮುಂದಿನ ಎರಡು ಅಥವಾ ಮೂರು ದಶಕದಲ್ಲಿ ಕನ್ನಡ ಐಡೆಂಟಿಟಿ ಉಳಿಸಿಕೊಳ್ಳುವುದು ಕಷ್ಟ. ಇಲ್ಲಿ ಅನ್ಯ ಭಾಷಿಕ ವಲಸಿಗರು ಬರುವುದು ಮತ್ತು ಈ ನೆಲ ಅವರದಾಗುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಹಿಂದಿ ಮತ್ತು ಕನ್ನಡ, ಕನ್ನಡ ಮತ್ತು ತಮಿಳು ನಡುವಿನ ಕಚ್ಚಾಟ ಅದೆಷ್ಟು ಬಾಲಿಶ ಎನ್ನುವುದರ ಅರಿವಾಯ್ತು ಎಂದುಕೊಳ್ಳುವೆ. ಯಾವ ರಾಜ್ಯಗಳಲ್ಲಿ ಫರ್ಟಿಲಿಟಿ ರೇಟ್ ಎರಡಕ್ಕಿಂತ ಹೆಚ್ಚಿದೆ ಆ ರಾಜ್ಯಗಳು ತಮ್ಮ ಗುರುತನ್ನು ಉಳಿಸಿಕೊಳ್ಳುತ್ತವೆ. ಉಳಿದ ರಾಜ್ಯಗಳು ನಿಧಾನವಾಗಿ ತಮ್ಮ ಭಾಷೆ , ಐಡೆಂಟಿಟಿ ಕಳೆದುಕೊಳ್ಳುತ್ತವೆ. ಭಾರತದಲ್ಲಿ ಜನಸಂಖ್ಯೆ ಹೆಚ್ಚು ಎನ್ನುತ್ತೇವೆ ಅಲ್ಲವೇ? ಭಾರತ ದೇಶವಾಗಿ ಒಟ್ಟಾರೆ ಫರ್ಟಿಲಿಟಿ ರೇಟ್ 1.9 ಎಂದರೆ ನಂಬುವಿರಾ? ಹೌದು ಭಾರತೀಯರ ಸಂಖ್ಯೆ ಕೂಡ ತೀವ್ರವಾಗಿ ಕುಸಿಯುತ್ತಿದೆ.

ಭಾರತೀಯತೆಯ ಗುರುತನ್ನು ಉಳಿಸಿಕೊಳ್ಳಲು ಬೇಕಿರುವ ಸಂಖ್ಯೆಗಿಂತ ನಮ್ಮ ಫರ್ಟಿಲಿಟಿ ರೇಟ್ ಕಡಿಮೆಯಿದೆ.

ಜಾಗತಿಕ ಮಟ್ಟದಲ್ಲಿ ಏನಾಗುತ್ತಿದೆ ನೋಡೋಣ

ಯೂರೋಪಿಯನ್ ಯೂನಿಯನ್ ಫರ್ಟಿಲಿಟಿ ರೇಟ್ 1.38 ಯೂರೋಪಿಯನ್ ಗುರುತನ್ನು, ಅಸ್ಮಿತೆಯನ್ನು ಉಳಿಸಿಕೊಳ್ಳಲು ಬೇಕಿರುವುದು ಕನಿಷ್ಠ 2.1 ಹೀಗಾಗಿ ಯೂರೋಪು ಇನ್ನೆರಡು ವರ್ಷದಲ್ಲಿ ವಲಸಿಗರಿಗೆ ಸೇರುತ್ತದೆ. ಜೆರ್ಮನಿ, ಸ್ಪೇನ್, ಇಟಲಿ , ಫ್ರಾನ್ಸ್ ದೇಶಗಳ ಫರ್ಟಿಲಿಟಿ ರೇಟ್ 1.5ಕ್ಕಿಂತ ಬಹಳ ಕಡಿಮೆಯಿದೆ. ಫ್ರಾನ್ಸ್, ಸ್ಪೇನ್ ದೇಶಗಳು 1.2 ಕ್ಕಿಂತ ಕಡಿಮೆ ಫರ್ಟಿಲಿಟಿ ರೇಟ್ ಹೊಂದಿವೆ. ಬಹುತೇಕ ಯೂರೋಪಿಯನ್ ದೇಶಗಳ ಕಥೆ ಇದು. ಹಾಂಗ್ ಕಾಂಗ್, ಮಕಾವು , ಸಿಂಗಾಪುರ, ಸೌತ್ ಕೊರಿಯಾ ಮತ್ತು ತೈವಾನ್ ದೇಶಗಳಲ್ಲಿ ಫರ್ಟಿಲಿಟಿ ರೇಟ್ ಒಂದಕ್ಕಿಂತ ಕಡಿಮೆಯಿದೆ. ಜಪಾನ್ ದೇಶದಲ್ಲಿ ಇದು 1.2 ಇದ್ದು ಜನಸಂಖ್ಯೆ ಕುಸಿತದೊಂದಿಗೆ ಅಲ್ಲಿ ಮುದುಕರ ಸಂಖ್ಯೆ ಕೂಡ ವೇಗವಾಗಿ ಹೆಚ್ಚುತ್ತಿದೆ. ಜಪಾನ್ ಮುಂದಿನ ಹತ್ತು ವರ್ಷದಲ್ಲಿ ಮೂಲ ಜಪಾನ್ ದೇಶವಾಗಿ ಉಳಿದುಕೊಳ್ಳುವುದಿಲ್ಲ. ಇವತ್ತಿಗೆ ಜಾಗತಿಕ ಮಟ್ಟದಲ್ಲಿ ಅಮೇರಿಕಾ ದೇಶಕ್ಕೆ ಸೆಡ್ಡು ಹೊಡೆದು ನಿಂತಿರುವ ಚೀನಾ ಕೂಡ ಮುಂದಿನ ಐವತ್ತು ವರ್ಷದಲ್ಲಿ ತನ್ನ ಜನಸಂಖ್ಯೆಯನ್ನು ಕಳೆದುಕೊಳ್ಳಲಿದೆ. ಚೀನಾ ದೇಶದ ಫರ್ಟಿಲಿಟಿ ರೇಟ್ 1 ಎನ್ನುವುದು ಆ ದೇಶಕ್ಕೆ ಆತಂಕವನ್ನು ಉಂಟು ಮಾಡುವುದರಲ್ಲಿ ಸಂಶಯವಿಲ್ಲ. ಚೀನಿಯರು ಅದಕ್ಕೆ ಕೂಡ ಈಗಾಗಲೇ ಪ್ಲಾನ್ ಸಿದ್ದ ಮಾಡಿರುತ್ತಾರೆ. ಈ ಎಲ್ಲಾ ದೇಶಗಳು ಇಂದಿಗೆ ಇಂದೇ ಪ್ಲಾನ್ ಮಾಡಿದರೂ ಕೂಡ ತಮ್ಮ ಗುರುತನ್ನು ಉಳಿಸಿಕೊಳ್ಳಲು ಹೆಣಗಬೇಕಾಗುತ್ತದೆ ಎನ್ನುವುದು ಸತ್ಯ.

ಈ ವಿಷಯದಲ್ಲಿ ಅಮೇರಿಕಾ ಚೀನಾಕ್ಕಿಂತ ಒಂದಷ್ಟು ವಾಸಿ ಎನ್ನಬಹುದು. ಅಮೇರಿಕಾದಲ್ಲಿ ಫರ್ಟಿಲಿಟಿ ರೇಟ್ ಇವತ್ತಿಗೆ 1.6 ಇದ್ದು , ಇದು ಕೂಡ ಉತ್ತಮ ಸಂಖ್ಯೆಯಲ್ಲ. ಭಾರತೀಯ ವಲಸಿಗರ ಮೇಲೆ ದ್ವೇಷ ಕಾರುತ್ತಿರುವ ಆಸ್ಟ್ರೇಲಿಯಾ 1.48 ಮತ್ತು ಇಂಗ್ಲೆಂಡ್



1.41 ಜನನ ಪ್ರಮಾಣವನ್ನು ಹೊಂದಿವೆ. ಈ ಮೂಲಕ ಈ ದೇಶಗಳು ಕೂಡ ತಮ್ಮ ಅಸ್ಮಿತೆಯನ್ನು ಶೀಘ್ರದಲ್ಲಿ ಕಳೆದುಕೊಳ್ಳಲಿವೆ. ಸೌತ್ ಅಮೇರಿಕಾದಲ್ಲಿ ಇದು 1.7 ಪ್ರತಿಶತವಿದೆ.

ಆಫ್ರಿಕನ್ ದೇಶಗಳಲ್ಲಿ ಜನನ ಪ್ರಮಾಣ 4.1 ! ಹೌದು ಉಳಿವಿಗೆ ಬೇಕಾಗಿರುವುದು 2.1. ಮುಂಬರುವ ವರ್ಷಗಳು ಯಾರಿಗೆ ಸೇರಿದ್ದು ಎಂದು ಹೇಳಬೇಕಾಗಿಲ್ಲ ಎಂದುಕೊಳ್ಳುವೆ. ಹೀಗಾಗಿ ಇದನ್ನು ನಾವು ಖಂಡಗಳ ಲೆಕ್ಕಾಚಾರದಲ್ಲಿ ನೋಡುವುದಾದರೆ ಆಫ್ರಿಕಾ ಖಂಡ 4.1. ಒಷ್ಯಾನಿಯ ಎನ್ನುವ 14 ಸ್ವತಂತ್ರ ದೇಶಗಳಲ್ಲಿ , ಅಂದರೆ ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್ , ಮಾರ್ಷಲ್ ಐಲ್ಯಾಂಡ್ ಇತ್ಯಾದಿಗಳಲ್ಲಿ ಇದು 2.3, ಏಷ್ಯಾ ಮತ್ತು ಸೌತ್ ಅಮೇರಿಕಾದಲ್ಲಿ 2, ನಾರ್ತ್ ಅಮೇರಿಕಾ 1.8 ಮತ್ತು ಯೂರೋಪು 1.6 ಇವತ್ತಿನ ದಿನದಲ್ಲಿ ದಾಖಲಾಗಿದೆ. ಇದರ ಪ್ರಕಾರ ಪ್ರಥಮವಾಗಿ ಯೂರೋಪು ತನ್ನ ಗುರುತನ್ನು ಕಳೆದುಕೊಳ್ಳಲಿದೆ. ಈಗಾಗಲೇ ಇಟಲಿ, ಸ್ಪೇನ್, ಪೋರ್ಚುಗಲ್ ದೇಶಗಳಲ್ಲಿ ಹಳ್ಳಿ ಪ್ರದೇಶಗಳಲ್ಲಿ ಜನರಿಲ್ಲದೆ ಊರಿಗೆ ಊರೇ ಪಾಳು ಬಿದ್ದಿವೆ.

ಕೊನೆ ಮಾತು: ಈ ರೀತಿಯ ಜನನ ಪ್ರಮಾಣ ಕುಸಿಯಲು ಪ್ರಮುಖ ಕಾರಣವೇನು ಗೊತ್ತೇ? ಅಭಿವೃದ್ಧಿ ಮತ್ತು ಹಣದುಬ್ಬರ. ಹೆಚ್ಚುತ್ತಿರುವ ಕಾಸ್ಟ್ ಆಫ್ ಲಿವಿಂಗ್ ಕಾರಣ ಜಗತ್ತಿನೆಲ್ಲೆಡೆ ಹೆಣ್ಣು ಗಂಡು ಇಬ್ಬರೂ ದುಡಿಯುವ ಅಗತ್ಯತೆ ಹೆಚ್ಚಾಯ್ತು. ಶಿಕ್ಷಣ, ವೈದ್ಯಕೀಯ ಖರ್ಚುಗಳು ಕೈಗೆಟುಕದ ಮಟ್ಟವನ್ನು ಮುಟ್ಟಿವೆ.ಸಮಾಜದಲ್ಲಿ ಹೆಚ್ಚಾಗಿರುವ ಒತ್ತಡ ಮಕ್ಕಳನ್ನು ಮಾಡಿಕೊಳ್ಳದಂತೆ, ಮಾಡಿಕೊಂಡರೂ ಒಂದು ಮಗುವಿಗೆ ಸಾಕು ಎನ್ನುವಂತೆ ಮಾಡಿವೆ. ಜಗತ್ತನ್ನು ಒಂದು ಎನ್ನುವಂತೆ ನೋಡಿದರೂ ಕೂಡ ನಮ್ಮ ಜನನ ಪ್ರಮಾಣ 2.4 ಎನ್ನುವುದು ನಾವೆಂದು ಕೊಂಡಂತೆ ಜಗತ್ತಿನ ಜನಸಂಖ್ಯೆ ಬೆಳೆಯುತ್ತಿಲ್ಲ. ಮುಂಬರುವ

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಎಸ್.ಸಿ.ಪಿ ಮತ್ತುಟಿ.ಎಸ್.ಪಿ ಕಾಯ್ದೆಗಳ ಸುಮಾರು 2 ಲಕ್ಷಕೋಟಿ ರೂಗಳನ್ನು ಸರಕಾರ ವಂಚನೆ ಮಾಡಿದೆ

ತುಮಕೂರು:ಎಸ್.ಸಿ.ಪಿ ಮತ್ತುಟಿ.ಎಸ್.ಪಿ ಕಾಯ್ದೆಗಳ ಹೆಸರಿನಲ್ಲಿದಲಿತ ಸಮೂಹಕ್ಕೆ ಸೇರಬೇಕಾದ ಸುಮಾರು 2 ಲಕ್ಷಕೋಟಿ ರೂಗಳನ್ನು ಅನ್ಯ ವಿಷಯಗಳಿಗೆ ಬಳಕೆ ಮಾಡಿ, ಸಿದ್ದರಾಮಯ್ಯ ನೇತೃತ್ವದ ಸರಕಾರದೊಡ್ಡ ವಂಚನೆ ಮಾಡಿದೆಎಂದುಕರ್ನಾಟಕದಲಿತ ಸಂಘರ್ಷ ಸಮಿತಿ(ರಿ) ಇದರರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿಂದು ಮಾತನಾಡಿದಅವರು, ದಲಿತ ಸಮೂಹದ ನಿರಂತರ ಹೋರಾಟದ ಫಲವಾಗಿ 2013ರಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಸರಕಾರ ನಾನು ದಲಿತಎಂದು ತೋರಿಸಿಕೊಳ್ಳಲು ಎಸ್.ಪಿ.ಪಿ ಮತ್ತುಟಿ.ಎಸ್.ಪಿ ಕಾಯ್ದೆಜಾರಿಗೆತಂದರೂ,ಕಾಯ್ದೆಯ ಕಲಂ 7 ಸಿ ಮತ್ತು ಡಿ ಸೇರಿಸಿ,ಸರಕಾರಕ್ಕೆ ಅಗತ್ಯ ಎನಿಸಿದಾಗ ಈ ಹಣವನ್ನುಅನ್ಯ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ ಒಂದುಕೈಯಲ್ಲಿಕೊಟ್ಟಂತೆ ಮಾಡಿ,ಮತ್ತೊಂದುಕೈಯಲ್ಲಿ ಕಸಿದುಕೊಳ್ಳುವ ಕೆಲಸ ಮಾಡಿದ್ದಾರೆ.ಇದೊಂದು ಮಹಾ ವಂಚನೆ.2013 ರಿಂದ 2025 ರವರೆಗೆ ಆಡಳಿತ ನಡೆಸಿದ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಸುಮಾರು 2 ಲಕ್ಷಕೋಟಿ ರೂಗಳನ್ನು ಅನ್ಯ ಕಾರ್ಯಗಳಿಗೆ ಬಳಕೆ ಮಾಡಿದೆಎಂದರು.

ಎಸ್.ಸಿ.ಪಿ ಮತ್ತುಟಿ.ಎಸ್.ಪಿ ಕಾಯ್ದೆತರಲು ಹೋರಾಟ ನಡೆಸಿದ ಸಮುದಾಯಕಾಯ್ದೆಯ ಕಲಂ 7ಸಿ ಮತ್ತುಡಿ ಗೆ ತಿದ್ದುಪಡಿತರಬೇಕೆಂದು ನಿರಂತರ ಹೋರಾಟ ನಡೆಸಿದ್ದ ಫಲವಾಗಿ ಸರಕಾರ 7 ಡಿ ತಿದ್ದುಪಡಿತರಲಾಯಿತೇ ವಿನಹಃ 7ಸಿ ಯನ್ನು ಹಾಗೆಯೇ ಉಳಿಸಿಕೊಂಡಿದೆ. ಇದರ ಪರಿಣಾಮ ಪಾವಗಡತಾಲೂಕಿನಕುಡಿಯುವ ನೀರಿನಯೋಜನೆಗೆ 11 ಸಾವಿರಕೋಟಿ ರೂಗಳ ಬಳಸಲಾಗಿದೆ.ಸರಕಾರದ ಶಕ್ತಿ ಯೋಜನೆಗೆದಲಿತರಿಗೆ ಮೀಸಲಿಟ್ಟಅನುದಾನವನ್ನು ಬಳಕೆ ಮಾಡಲಾಗಿದೆ.ಹಾಗಾಗಿ 2026–27ನೇ ಸಾಲಿನ ಬಜೆಟ್ ಮಂಡಿಸುವ ವೇಳೆ ಕಾಯ್ದೆ7 ಸಿ ಗೂ ತಿದ್ದುಪಡಿತರಬೇಕೆಂಬುದು ನಮ್ಮಆಗ್ರಹವಾಗಿದೆಎಂದು ವೆಂಕಟಗಿರಿಯಯ್ಯ ತಿಳಿಸಿದರು.

ನಾನು ದಲಿತ ಪರಎನ್ನುವಕಾಂಗ್ರೆಸ್ ಪಕ್ಷದಲಿತರ ಪ್ರಾಣ, ಮಾನ, ಆಸ್ತಿ, ಪಾಸ್ತಿ



ರಕ್ಷಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ.ದಲಿತರ ಮೇಲೆ ದೌರ್ಜನ್ಯ ನಡೆದರೆಎಸ್.ಪಿ ಮತ್ತು ಡಿ.ಸಿ.ಯನ್ನು ಹೊಣೆ ಮಾಡುವುದಾಗಿ ಬೋಗಳೆ ಭಾಷಣ ಬಿಗಿರುವ ಸಿದ್ದರಾಮಯ್ಯ ಅವರು ಹುಬ್ಬಳಿಯಲ್ಲಿ ದಲಿತಯುವಕನ ಮದುವೆಯಾದಗರ್ಭಿಣಿ ಮಾನ್ಯಳ ಮರ್ಯಾದೆ ಹತ್ಯ ಪ್ರಕರಣ ಹಾಗೂ ಚಿಕ್ಕಬಳ್ಳಾಪುರದ ಮತ್ತೊಂದು ಮರ್ಯಾದೆ ಹತ್ಯಾ ಪ್ರಕರಣದಲ್ಲಿಇದುವರೆಗ ಊಯಾರನ್ನುಅಮಾನತ್ತು ಮಾಡಿಲ್ಲ.ಬದಲಾಗಿರಾಜಕೀಯಕಾರಣಕ್ಕಾಗಿ ನಡೆದ ಬಳ್ಳಾರಿ ಗಲಾಟೆಯಲ್ಲಿ ಎಸ್ಪಿ ಅವರನ್ನುಅಮಾನತು ಮಾಡುವ ಮೂಲಕ ದ್ವಂದ್ವ ನಿಲುವನ್ನು ಪ್ರಕಟಿಸಿದೆ.ಇಂತಹ ಮರ್ಯಾಧೆ ಹತ್ಯೆಯನ್ನುತಡೆಯುವ ನಿಟ್ಟಿನಲ್ಲಿಕಠಿಣ ಕಾನೂನು ತರಬೇಕೆಂಬುದುಕರ್ನಾಟಕದಲಿತ ಸಂಘರ್ಷ ಸಮಿತಿಯಒತ್ತಾಯವಾಗಿದೆಎಂದರು.

ದಲಿತ ಸಂಘಟನೆಗಳ ಹೋರಾಟಕ್ಕೆ ಮಣಿದು ಸರಕಾರ ಚಳಿಗಾಲದ ಅಧಿವೇಶನದಲ್ಲಿ ಸಾಮಾಜಿಕ ಬಹಿಷ್ಕಾರತಡೆಕಾಯ್ದೆಯನ್ನುಜಾರಿಗೆತಂದಿದೆ. ಆದರೆ ಶಿಕ್ಷೆಯ ಪ್ರಮಾಣವನ್ನು ಮೂರು ವರ್ಷಕ್ಕೆ ಸಿಮೀತಗೊಳಿಸಿದೆ.ಸುಪ್ರಿಂಕೋರ್ಟಿನ ಗೈಡ್‌ಲೈನ್ ಪ್ರಕಾರ ಮೂರು ವರ್ಷಕ್ಕಿಂತಕಡಿಮೆ ಶಿಕ್ಷೆ ಇರುವ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂದಿಸಲೇಬೇಕೆಂದಿಲ್ಲ. ಈ ನಿಯಮದಅಡಿಯಲ್ಲಿಯೇ ಅಟ್ರಾಸಿಟಿ ಕೇಸಿನಲ್ಲಿಯೂ ಆರೋಪಿಗಳ ವಿರುದ್ದಎಫ್.ಐ.ಆರ್.ಆದತಕ್ಷಣ ಬಂಧವಿಲ್ಲ. ಸಾಮಾಜಿಕ ಬಹಿಷ್ಕಾರತಡೆಕಾಯ್ದೆಯೂಅದೇರೀತಿ ಹಲ್ಲುಕಿತ್ತ ಹಾವಿನಂತಾಗುತ್ತದೆ.ಹಾಗಾಗಿ ಶಿಕ್ಷೆಯ ಪ್ರಮಾಣವನ್ನು 3 ವರ್ಷಕ್ಕೆ ಬದಲಾಗಿ 7 ವರ್ಷಗಳಿಗೆ ಹೆಚ್ಚಿಸಬೇಕೆಂಬುದುಎಲ್ಲಾ ಶೋಷಿತರಒತ್ತಾಯವಾಗಿದೆಎಂದು ವೆಂಕಟಗಿರಿಯಯ್ಯ ನುಡಿದರು.

ಸಿದ್ದರಾಮಯ್ಯ ಸರಕಾರ ನಾನು ಹೆಣ್ಣು ಮಕ್ಕಳ ಪರಎಂದು ಬಿಂಬಿಸಿಕೊಳ್ಳಲು ಅವರಿಗೆ ಹಲವಾರು ಯೋಜನೆಗಳನ್ನು ಘೋಷಿಸಿದೆ.ಜೊತೆಗೆ ಸರಕಾರಿ,ಅರೆ ಸರಕಾರಿ,ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ವೇತನ ಸಹಿತಋತುಚಕ್ರರಜೆ ನೀಡಿದೆ.ಆದರೆ ನಿಜವಾಗಿಯೂ ವೇತನ ಸಹಿತರಜೆ ಸಿಗಬೇಕಿರುವುದುಕೃಷಿ,ಕೂಲಿಕಾರ್ಮಿಕಮಹಿಳೆಯರಿಗೆ.ಋತುಚಕ್ರದದಿನಗಳಲ್ಲಿ ಮಹಿಳೆಯರು ಎಷ್ಟು ನೋವು ಅನುಭವಿಸುತ್ತಾರೆಎಂಬುದನ್ನುಅವರಿಂದಲೇ ಕೇಳಿ ತಿಳಿಯಬೇಕಿದೆ. ಸರಕಾರಿ ಹುದ್ದೆಗಳಲ್ಲಿ ಇರುವ ಹೆಂಗಸರಿಗಿಂತ ಹೊಲ, ಗದ್ದೆಗಳಲ್ಲಿ ಕೆಲಸ ಮಾಡುವ ಕೃಷಿ, ಕೂಲಿ ಕಾರ್ಮಿಕ ಮಹಿಳೆಯರು ಸಾಕಷ್ಟು ನೋವು ಅನುಭವಿಸುತ್ತಾರೆ.ಸರಕಾರಇಂತಹವರಿಗೆ ವೇತನ ಸಹಿತರಜೆ ನೀಡಬೇಕೆಂದುಕರ್ನಾಟಕದಲಿತ ಸಂಘರ್ಷ ಸಮಿತಿ ಸರಕಾರವನ್ನುಒತ್ತಾಯಿಸುತ್ತದೆಎಂದರು.

ಸರಕಾರ ಮೇಲಿನ ಈ ನಾಲ್ಕು ವಿಚಾರಗಳ ಬಗ್ಗೆ ಸೂಕ್ತನಿರ್ಧಾರವನ್ನುಕೈಗೊಂಡು, ಮುಂಬರುವ 2026–27 ರ ಬಜೆಟ್‌ನಲ್ಲಿ ಅನುಷ್ಠಾನಕ್ಕೆ ತರದಿಂದ್ದರೆ ಸಿದ್ದರಾಮಯ್ಯ ಸೇರಿದಂತೆಕಾಂಗ್ರೆಸ್ ಪಕ್ಷದಎಲ್ಲಾ ಮಂತ್ರಿಗಳಿಗೆ ಕಂಡಕಂಡಲ್ಲಿಘೇರಾವ್ ಹಾಕುವ ಪ್ರತಿರೋಧದ ಪ್ರತಿಭಟನೆಯನ್ನುದಸಂಸ ಕೈಗೊಳ್ಳಲಿದೆ ಎಂದುಕರ್ನಾಟಕದಲಿತ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿಕರ್ನಾಟಕದಲಿತ ಸಂಘರ್ಷ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ತುಮಕೂರುಜಿಲ್ಲಾಉಸ್ತುವಾರಿ ಬೆಲ್ಲದಮಡುಕೃಷ್ಣಪ್ಪ,ತುಮಕೂರುಜಿಲ್ಲಾಧ್ಯಕ್ಷಟೈರ್‌ರಂಗನಾಥ್,ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಡಿ.ಹನುಮಂತರಾಯಪ್ಪ, ಮಹಿಳಾ ಮುಖಂಡರಾದ ಲಾವಣ್ಯ, ಮಂಡ್ಯ ಮಹಿಳಾ ಮುಖಂಡರಾದ ಸುಶ್ಮಿತ, ಮಧುಗಿರಿರವಿಕುಮಾರ್, ವಕೀಲರಾದಧನಂಜಯ್ಯ ಬ್ಯಾಡರಹಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ದನ ಕಾಯುತ್ತಿದ್ದವ ಈಗ 260 ದೇಶಿಯ ಭತ್ತದ ತಳಿಗಳ ಸಂರಕ್ಷಕ! ಮೌನ ಕ್ರಾಂತಿಯ ರೈತ ಶಂಕರ್ ಲಂಗಟಿ ಯಶೋಗಾಥೆ..!

ಸೂರ್ಯಪ್ರಗತಿ ನ್ಯೂಸ್.ಕಾಂ

14 ವರ್ಷದವರಾಗಿದ್ದಾಗ ತನ್ನ ತಂದೆಯನ್ನು ಕಳೆದುಕೊಂಡ ಶಂಕರ್ ಅವರಿಗೆ ಪಿತ್ರಾರ್ಜಿತವಾಗಿ ಬಂದ ಮೂರು ಎಕರೆ ಜಮೀನು ಇತ್ತು. ಆದರೆ ಆರ್ಥಿಕವಾಗಿ ಯಾವುದೇ ನೆರವು ಸಿಗದೆ ಹಳ್ಳಿಯಲ್ಲಿ ದನ ಕಾಯುವ ಕೆಲಸ ಆರಂಭಿಸಿ ತಿಂಗಳಿಗೆ ರೂ. 300 ಪಡೆಯುತ್ತಿದ್ದರು.

ಬೆಳಗಾವಿ: ಬೆಳಗಾವಿ ಜಿಲ್ಲೆಯ ಗುಂಡೇನಟ್ಟಿ ಗ್ರಾಮದಲ್ಲಿ ದೇಸಿ ಭತ್ತದ ತಳಿಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಮೌನ ಕ್ರಾಂತಿ ನಡೆಯುತ್ತಿದೆ. ಈ ಗ್ರಾಮದ ಸಣ್ಣ ರೈತ ಶಂಕರ್ ಹನುಮಂತ ಲಂಗಟಿ ಈಗ ಅವಸಾನದ ಅಂಚಿನಲ್ಲಿದ್ದ ಸುಮಾರು 260ಕ್ಕೂ ಹೆಚ್ಚು ಭತ್ತದ ತಳಿಗಳ ಸಂರಕ್ಷಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಬಡತನದ ಕಾರಣ 3ನೇ ತರಗತಿಯ ನಂತರ ಓದನ್ನು ನಿಲ್ಲಿಸಬೇಕಾದ ಅನಿವಾರ್ಯತೆಗೆ ಸಿಲುಕಿದ ಶಂಕರ್, ಸಾಂಪ್ರದಾಯಿಕವಾಗಿ ಬೆಳೆದ ಭತ್ತದ ತಳಿಗಳನ್ನು ಸಂಗ್ರಹಿಸಿ ಅವುಗಳನ್ನು ಸಂರಕ್ಷಿಸುವ ಹವ್ಯಾಸ ಮುಂದೊಂದು ದಿನ ತನಗೆ ಹೆಸರು ಮತ್ತು ಕೀರ್ತಿ ತರುತ್ತದೆ ಅಂತಾ ಎಂದೂ ಅಂದುಕೊಂಡಿರಲಿಲ್ಲ.

ದನ ಕಾಯುವ ಕೆಲಸದಲ್ಲಿ ತಿಂಗಳಿಗೆ ರೂ.300

14 ವರ್ಷದವರಾಗಿದ್ದಾಗ ತನ್ನ ತಂದೆಯನ್ನು ಕಳೆದುಕೊಂಡ ಶಂಕರ್ ಅವರಿಗೆ ಪಿತ್ರಾರ್ಜಿತವಾಗಿ ಬಂದ ಮೂರು ಎಕರೆ ಜಮೀನು ಇತ್ತು. ಆದರೆ ಆರ್ಥಿಕವಾಗಿ ಯಾವುದೇ ನೆರವು ಸಿಗದೆ ಹಳ್ಳಿಯಲ್ಲಿ ದನ ಕಾಯುವ ಕೆಲಸ ಆರಂಭಿಸಿ ತಿಂಗಳಿಗೆ ರೂ. 300 ಪಡೆಯುತ್ತಿದ್ದರು. ನಂತರ ಅವರು ಕಬ್ಬು, ಭತ್ತ ಮತ್ತು ಇತರ ಬೆಳೆಗಳನ್ನು ಕಟಾವು ಮಾಡುವ ಕೃಷಿ ಕಾರ್ಮಿಕರಾಗಿ ಕೆಲಸ ಮಾಡಲು ಶುರು ಮಾಡುತ್ತಾರೆ. 2003 ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಮಹಿಳಾ ಸಬಲೀಕರಣವನ್ನು ಉತ್ತೇಜಿಸುವ ಕಾರ್ಯಕರ್ತೆ ಶಾರದ ದಭಾಡೆ ಅವರ ಸಲಹೆಯ ಮೇರೆಗೆ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಖಐಆಖಆಕ) ಮತ್ತು ಉಖಇಇಓ ಫೌಂಡೇಶನ್ ಆಯೋಜಿಸಿದ್ದ ಬೀಜ ಮೇಳದಲ್ಲಿ ಶಂಕರ್ ಪಾಲ್ಗೊಂಡಿದ್ದರು.

ಮೇಳದಲ್ಲಿ ಒಂದು ಕಾಲದಲ್ಲಿ ಜನಪ್ರಿಯವಾಗಿದ್ದ 25 ಸ್ಥಳೀಯ ಭತ್ತದ ತಳಿಗಳನ್ನು ನೋಡಿದ್ದಾರೆ. ಆದರೆ ಅವುಗಳು ಹೆಚ್ಚಿನ ಇಳುವರಿ ನೀಡುವ ಹೈಬ್ರಿಡ್‌ಗಳಿಗೆ ಸ್ಥಳಾಂತರಗೊಂಡ ರೈತರಿಂದ ನಿರ್ಲಕ್ಷಿಸಲ್ಪಟ್ಟಿದ್ದವು. ಆ ಭತ್ತದ ತಳಿಗಳನ್ನು ಮನೆಗೆ ತಂದು ತಮ್ಮ ಜಮೀನಿನಲ್ಲಿ ಬಿತ್ತಿದರು.



ಸಾಂಪ್ರದಾಯಿಕ ಕೃಷಿ ವಿಧಾನಗಳನ್ನು ಬಳಸಿ, ಉತ್ತಮ ಇಳುವರಿ ಪಡೆದರು. ಇದರಿಂದ ಉತ್ತೇಜಿತರಾದ ಅವರು ಧಾರವಾಡದ ಶಿವರಾಜ್ ಹುನಗುಂದ ಮತ್ತು 'ಖಚಿತಜ ಖಜಜಢ'ನ ಕೃಷ್ಣ ಪ್ರಸಾದ್ ಅವರ ಮಾರ್ಗದರ್ಶನದಲ್ಲಿ ದೇಶದಲ್ಲಿ ಮರೆಯಲಾದ ಭತ್ತದ ತಳಿಗಳನ್ನು ಪತ್ತೆ ಮಾಡುವ, ಬೆಳೆಸುವ ಮತ್ತು ಸಂರಕ್ಷಿಸುವ ಕಾಯಕ ಆರಂಭಿಸಿದರು. ಸ್ಥಳೀಂಮ ತಳಿಗಳನ್ನು ಸಂಗ್ರಹಿಸಲು ಬೆಳಗಾವಿ, ಧಾರವಾಡ, ಗೋವಾ, ಒಡಿಶಾ, ಮಣಿಪುರ, ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರಪ್ರದೇಶದಂತಹ ಇತರ ಭತ್ತ ಬೆಳೆಯುವ ರಾಜ್ಯಗಳಿಗೆ ಭೇಟಿ ನೀಡಿದರು. ಶಂಕರ್ ಅವರ ಪ್ರಯತ್ನವನ್ನು ಗುರುತಿಸಿ, ಧಾರವಾಡದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯವು ಅವರಿಗೆ 50 ಸ್ಥಳೀಯ ಭತ್ತದ ತಳಿಗಳನ್ನು ನೀಡಿದೆ.

ಶಂಕರ್ ಅವರು ಸಾಂಪ್ರದಾಯಿಕ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡಿದ್ದು, ರಾಸಾಯನಿಕ ಕೀಟನಾಶಕಗಳು ಮತ್ತು ರಸಗೊಬ್ಬರಗಳನ್ನು ತಿರಸ್ಕರಿಸಿದ್ದಾರೆ. ಅವರು ಮಾನ್ಸೂನ್ ಸಮಯದಲ್ಲಿ ಭತ್ತ, ದ್ವಿದಳ ಧಾನ್ಯಗಳು, ತರಕಾರಿಗಳು, ಕಡಲೆಯಂತಹ ಇತರ ಬೆಳೆಗಳನ್ನು ಬೆಳೆಯುತ್ತಾರೆ.

ಮಾರ್ಕೆಟಿಂಗ್ ಕಾರ್ಯತಂತ್ರ: ಶಂಕರ್ ಅವರು ತಮ್ಮ ಉತ್ಪನ್ನಗಳಿಗೆ ವಿಶ್ವಾಸಾರ್ಹ ಗ್ರಾಹಕರನ್ನು ಹೊಂದಿದ್ದಾರೆ. ಗುಂಡೇನಟ್ಟಿಯ ಹೊರವಲಯದಲ್ಲಿ ರೈತರು ಮತ್ತು ಗ್ರಾಹಕರು ತಮ್ಮ ಉತ್ಪನ್ನಗಳನ್ನು ನೇರವಾಗಿ ಖರೀದಿಸುವ ಅಂಗಡಿ–ಕಮ್ –ಗೋದಾಮು ನಿರ್ಮಿಸಿದ್ದಾರೆ. ಪ್ರತಿ ಗುರುವಾರ ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನಕ್ಕೆ ಅಕ್ಕಿ, ಬೇಳೆಕಾಳು ಮತ್ತು ತರಕಾರಿಗಳನ್ನು ಮಾರಾಟ ಮಾಡಲು ಹೋಗುತ್ತಾರೆ.

9 ಎಕರೆ ಜಮೀನು ಖರೀದಿಸಿದ ಶಂಕರ್: ಕೆಲವು ವರ್ಷಗಳ ಹಿಂದೆ, ಶಂಕರ್ ಅವರು ತಮ್ಮ ಜಮೀನಿನ ಪಕ್ಕದಲ್ಲಿ ಇನ್ನೂ ಒಂಬತ್ತು ಎಕರೆ ಜಮೀನನ್ನು ಖರೀದಿಸಿದರು. ಅಲ್ಲಿ ಭತ್ತ ಮತ್ತಿತರ ಬೆಳೆಗಳನ್ನು ಬೆಳೆಯುವುದರ ಜೊತೆಗೆ ಹೈನುಗಾರಿಕೆ ಮತ್ತು ಮೀನು ಸಾಕಾಣಿಕೆಯನ್ನು ಕೈಗೊಂಡಿದ್ದಾರೆ. 260 ಕ್ಕೂ ಹೆಚ್ಚು ಭತ್ತದ ತಳಿಗಳ ಹೊರತಾಗಿ ಅಳಿವಿನಂಚಿನಲ್ಲಿರುವ ಹಸಿರು, ಕೆಂಪು, ಕಪ್ಪು ಮತ್ತು ಬಿಳಿ ಬಣ್ಣದ ಕಡಲೆ, ಕೆಂಪು ಗೋಧಿ ಬೀಜಗಳನ್ನು ಅವರು ಸಂಗ್ರಹಿಸಿದ್ದಾರೆ.

ಶಂಕರ್ ಹನುಮಂತ ಲಂಗಟಿ

ಪ್ರಶಸ್ತಿಗಳು ಮತ್ತು ಮನ್ನಣೆ: ಶಂಕರ್ ಅವರು ಸುಸ್ಥಿರ ಕೃಷಿ ಮತ್ತು ಮಾರುಕಟ್ಟೆ ಪರಿಸ್ಥಿತಿಗಳನ್ನು ಅಧ್ಯಯನ ಮಾಡಲು ಹಲವು ದೇಶಗಳಿಗೆ ಭೇಟಿ ನೀಡಿದ್ದಾರೆ. ಅವರು ಪ್ರಗತಿಪರ ರೈತರು ಮತ್ತು ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾರೆ. ವಿಜ್ಞಾನಿಗಳು ಸಹ ಅವರ ಕೃಷಿ ವಿಧಾನಗಳನ್ನು ಅಧ್ಯಯನ ಮಾಡಲು ಅವರ ಜಮೀನಿಗೆ ಭೇಟಿ ನೀಡುತ್ತಾರೆ. ಅವರ ಪ್ರಯತ್ನಗಳು ಪ್ರಸಿದ್ಧ ಸಂಸ್ಥೆಗಳಿಂದ ಪ್ರಶಸ್ತಿಗಳು ಮತ್ತು ಮನ್ನಣೆಯನ್ನು ಗಳಿಸಿವೆ.

ಶಂಕರ್ ಅವರಿಗೆ ಕೇಂದ್ರ ಸರ್ಕಾರದಿಂದ ರೂ. 10 ಲಕ್ಷ ನಗದು ಬಹುಮಾನ ಹೊಂದಿರುವ ಸಸ್ಯ ತಳಿಗಳ ಸಂರಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಜಿಲ್ಲಾ ಮತ್ತು ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ; ಆರ್ಟ್ ಆಫ್ ಲಿವಿಂಗ್, ಧರ್ಮಸ್ಥಳ ಫೌಂಡೇಶನ್ ಮತ್ತು ಕರ್ನಾಟಕ ಜೀವವೈವಿಧ್ಯ ಮಂಡಳಿಯಿಂದ ಸನ್ಮಾನಿಸಲಾಗಿದೆ. ಹೈದರಾಬಾದ್‌ನ ಐಸಿಎಆರ್ ನಿಂದ ರೈಸ್ ಇನ್ನೋವೇಶನ್ ಫಾರ್ಮರ್ ಪ್ರಶಸ್ತಿ, ಧಾರವಾಡ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಸಂದಿದೆ. ಅವರ ದೇಶಿ ಭತ್ತದ ತಳಿಗಳನ್ನು ಐಸಿಎಆರ್ ನಲ್ಲಿ ನೋಂದಾಯಿಸಲಾಗಿದೆ. ಇತ್ತೀಚೆಗೆ, ಶಂಕರ್ ಅವರು ಮಧುಮೇಹಿಗಳಿಗೆ ಸೂಕ್ತವೆಂದು ಪರಿಗಣಿಸಲಾದ 'ಸುರೇಂದ್ರಸಾಲಿ' ಎಂಬ ಕೆಂಪು ಅಕ್ಕಿ ತಳಿಯನ್ನು ಬಿಡುಗಡೆ ಮಾಡಿದ್ದಾರೆ.

ಇಬ್ಬರು ಪುತ್ರರ ನೆರವಿನಿಂದ ಶಂಕರ್ ಈಗ ಕೃಷಿ ಉದ್ಯಮವನ್ನು ವಿಸ್ತರಿಸುತ್ತಿದ್ದು, ಖಾನಾಪುರ ತಾಲೂಕಿನಲ್ಲಿ 50 ಎಕರೆ ಗುತ್ತಿಗೆ ಪಡೆದಿದ್ದಾರೆ. ತಮ್ಮ ಹೋರಾಟದ ಆರಂಭದ ದಿನಗಳನ್ನು ವಿವರಿಸಿದ



ಶಂಕರ್ ಅವರ ಪತ್ನಿ ಮಹಾದೇವಿ, "ನಾವು ಕೂಲಿ ಕೆಲಸ ಮಾಡಿದ್ದೇವೆ, ದನ ಮೇಯಿಸಿದ್ದೇವೆ, ನನ್ನ ಪತಿ ಮೊದಲಿನಿಂದಲೂ ಯಶಸ್ವಿ ಕೃಷಿ ಉದ್ಯಮವನ್ನು ಸ್ಥಾಪಿಸಿದ್ದಾರೆ, ಈಗ ನಾವು ನಮ್ಮ ದುಡಿಮೆಯ ಫಲವನ್ನು ಪಡೆಯುತ್ತಿದ್ದೇವೆ" ಎಂದು ಹೇಳಿದರು.

ಸೂರ್ಯಪ್ರಗತಿ ನ್ಯೂಸ್.ಕಾಂ.

SP NEWS
ಅತಿ ಶೀಘ್ರದಲ್ಲಿ

# ಸಿದ್ದರಾಮಯ್ಯನವರ ಸರ್ಕಾರ ರೈತರ ಸರ್ವತೋಮುಖ ಅಭಿವೃದ್ಧಿಗೆ ಶ್ರಮವಹಿಸಿ ಕೆಲಸ ಮಾಡುತಿದೆ



ಮಧುಗಿರಿ : ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರ ನೀರಾವರಿ ಯೋಜನೆಗಳಿಗೆ ಮತ್ತು ರೈತರ ಅಭ್ಯದಯಕ್ಕೆ ಆದ್ಯತೆ ನೀಡುತ್ತಿದ್ದು, ರಾಜ್ಯದಲ್ಲಿ ಅನೇಕ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿ ರೈತರ ಸರ್ವತೋಮುಖ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ ಶ್ರಮವಹಿಸಿ ಕೆಲಸ ಮಾಡುತಿದೆ ಎಂದು ಸಣ್ಣ ನೀರಾವರಿ ಇಲಾಖೆಯ ಸಚಿವ ಎನ್. ಎಸ್. ಭೋಸರಾಜು ತಿಳಿಸಿದರು.

ತಾಲೂಕಿನ ಕೊಡಿಗೇನಹಳ್ಳಿ ಹೋಬಳಿಯ ಮುದ್ದೇನಹಳ್ಳಿ ಗ್ರಾಮದಲ್ಲಿ ಶನಿವಾರ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಸಹಯೋಗದೊಂದಿಗೆ ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 29.50 ಕೋಟಿ ರೂಗಳ ವೆಚ್ಚದ ಚೆಕ್ ಡ್ಯಾಂ ಕಂ ಬ್ರಿಡ್ಜ್ ಕಾಮಗಾರಿಗಳ ಶಂಕುಸ್ಥಾಪನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯದಲ್ಲಿ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಿ ರೈತರಿಗೆ ಅನುಕೂಲ ಮಾಡಿಕೊಡಲು ಕೇಂದ್ರ ಸರ್ಕಾರಕ್ಕೆ 3 ಸಾವಿರ ಕೋಟಿ ರೂಗಳ ಪ್ರಸ್ತಾವನೆ ಸಲ್ಲಿಸಲಾಗಿದೆ ಜಿಲ್ಲೆಯ ಸಂಸದ ವಿ.ಸೋಮಣ್ಣನವರು ಸಚಿವರಾದ ನಂತರ ನೀರಾವರಿ ಯೋಜನೆಗಳಿಗಾಗಿ 170 ಕೊಟಿ ಅನುದಾನ ಕೊಡಿಸಿದ್ದು, ತುಮಕೂರು ಜಿಲ್ಲೆಗೆ 100 ಕೋಟಿ ಅನುದಾನ ಮಂಜೂರು ಮಾಡಲಾಗಿದೆ ಎಂದರು.

ಮಧುಗಿರಿ ಕ್ಷೇತ್ರ ವ್ಯಾಪ್ತಿಯಲ್ಲಿ ಈಗ 29.50 ಕೋಟಿ ರೂಗಳ ಚೆಕ್ ಡ್ಯಾಂ ಕಮ್ ಬ್ರಿಡ್ಜ್ ಕಾಮಗಾರಿ ಕೈಗೆತ್ತಿಕೊಂಡಿದ್ದು, 4 ತಿಂಗಳ ಒಳಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ ಎಂದರು.

ಮಾಜಿ ಸಚಿವ, ಶಾಸಕ ಕೆ.ಎನ್. ರಾಜಣ್ಣ ಮಾತನಾಡಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಜಂಟಿಯಾಗಿ ತಾಲೂಕಿನ ಕೊಡಿಗೇನಹಳ್ಳಿ ಹೋಬಳಿಯ ಮುದ್ದೇನಹಳ್ಳಿ–ಶಾನಗಾನಹಳ್ಳಿ ಬಳಿ ಜಯಮಂಗಲಿ ನದಿಗೆ, ತಿಂಗಳೂರು–ಕಲಿದೇವಪುರ ನಡುವೆ ಕುಮದ್ವತಿ ನದಿಗೆ, ದೊಡ್ಡೇರಿ ಹೋಬಳಿಯ ಜಕ್ಕೇನಹಳ್ಳಿ ಶಂಕರಾಪುರ ನಡುವೆ ಸುವರ್ಣಮುಖಿ ನದಿಗೆ ಒಟ್ಟು 29.5 ಕೊಟಿ ರೂಗಳ ವೆಚ್ಚದಲ್ಲಿ ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಕ್ಷೇತ್ರದ ರೈತರ ಜೀವನ ಹಸನು ಮಾಡಲು ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಈ ಭಾಗದ ಜನರ ನೆನಪಿನಲ್ಲಿ ಸದಾ ಉಳಿಯುವ ಯೋಜನೆಯಾಗಿದೆ. ನೀರಾವರಿ ಸಚಿವ ಬೋಸರಾಜುರವರು ಹೆಚ್ಚು ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದು, ಹಳ್ಳಿಗಾಡಿನ ಅಭ್ಯುದಯಕ್ಕೆ ಶ್ರಮಿಸುತ್ತಿದ್ದಾರೆ. ಸಾರ್ವಜನಿಕರ ಹಿತಕ್ಕಾಗಿ

ಅಧಿಕಾರಿಗಳೂ ಸಹ ಹೆಚ್ಚು ಆಸಕ್ತಿಯಿಂದ ಈ ಭಾಗದಲ್ಲಿ ಸರ್ವೆಕಾರ್ಯ ನಡೆಸಿ ಯೋಜನೆ ರೂಪಿಸಿದ್ದಾರೆ. ನದಿ ಭಾಗದಲ್ಲಿ ಬಿಸಿಲು ರಾಚುತ್ತಿದ್ದರೂ ಮರಳಲ್ಲಿ ಓಡಾಡಿ ಅತೀ ಶೀಘ್ರದಲ್ಲೇ ಶ್ರಮ ವಹಿಸಿ ಚಟುವಟಿಕೆ ಮುಗಿಸಿದ್ದಾರೆ ಎಂದರು.

50 ವರ್ಷಗಳ ಹಿಂದೆ ಸಮೃದ್ಧಿಯಾಗಿದ್ದ ಈ ಭಾಗ ಹವಾಮಾನದ ಅವಕೃಪೆಗೆ ಒಳಗಾಗಿ ಇಂದು ಮಧುಗಿರಿ ಬರಪೀಡಿತ ಪ್ರದೇಶವಾಗಿದೆ. ಮಳೆ ಆದಾರಿತ ವ್ಯವಸಾಯ ನಂಬಿಕೊಂಡು ಈ ಭಾಗದ ಜನತೆ ಜೀವನ ನಿರ್ವಹಣೆ ಮಾಡುತ್ತಿದ್ದು, ರೈತ ಬೆಳೆಯುವ ಬೆಳೆಯ ಬಂಡವಾಳವೂ ಹುಟ್ಟುವುದಿಲ್ಲ. ರೈತ ಬೆಳೆದ ಫಸಲಿಗೆ ಉತ್ತಮ ಬೆಲೆ ದೊರೆಯಬೇಕು. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಿ ಜನತೆಗೆ ಅನುಕೂಲ ಮಾಡಿಕೊಡಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಾನು ಹುಟ್ಟಿದ್ದು ಮಾಗಡಿಯಲ್ಲಿ ಬೆಳೆದಿದ್ದು ತುಮಕೂರಿನಲ್ಲಿ ರಾಜಕೀಯ ಶಕ್ತಿ ಪಡೆದಿದ್ದು ಮಧುಗಿರಿಯಲ್ಲಿ ಇಲ್ಲಿ ನನಗೆ ಸಂಬಂಧಿಕರು ಇಲ್ಲ ನಾನು ಹೊಸಬನಾದರೂ ಈ ಕ್ಷೇತ್ರದ ಜನತೆ ನನ್ನ ಮೇಲೆ ವಿಶ್ವಾಸವಿಟ್ಟು ಬೆಂಬಲಿಸುತ್ತ ಬಂದಿದ್ದೀರಾ ಇದನ್ನು ಮರೆಯಲು ಸಾಧ್ಯವಿಲ್ಲ ಉಪಕಾರ ಸ್ಮರಣೆ ಮಾಡಲ್ಲಿಲ್ಲವೆಂದರೆ ಅದು ತಪ್ಪಾಗುತ್ತದೆ ನೀವೆಲ್ಲರೂ ನನ್ನ ಮೇಲೆ ಹೆಚ್ಚಿನ ಭಾರ ಹೊರಿಸಿದ್ದೀರಾ ನಮಗೆ ಸಹಾಯ ಮಾಡಿ ಕೈ ಹಿಡಿದವರನ್ನು ಎಂದಿಗೂ ಮರೆಯಬಾರದು ಒಂದು ವೇಳೆ ಮರೆತರೆ ಒಳಿತಾಗುವುದಿಲ್ಲ ಈ ಕ್ಷೇತ್ರದ ಜನತೆಯ ಋಣ ನನ್ನ ಮೇಲಿದೆ ಬಡ ವರ್ಗದವರು ಹಾಗೂ ವಿದ್ಯಾರ್ಥಿಗಳ ಏಳ್ಗೆಗಾಗಿ ಶ್ರಮಿಸುತ್ತಾ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಸದಾಕಾಲವೂ ಜನರ ಜೊತೆಗಿದ್ದು ಋಣಮುಕ್ತನಾಗುವೆ...ಶಾಸಕ ಕೆ.ಎನ್.ರಾಜಣ್ಣ.

# ಶುದ್ಧ ಕುಡಿಯುವ ನೀರು ಬಳಸುವಂತೆ 2000 ಕ್ಕೂ ಹೆಚ್ಚು ನೀರಿನ ಕ್ಯಾನ್ ವಿತರಣೆ.



ಶಿರಾ : ತಾಲೂಕಿನ ಶಾಸಕರು ಹಾಗೂ ಮಾಜಿ ಸಚಿವರಾದ ಮರೆಯಲಾಗದ ಮಾಣಿಕ್ಯ ದಿ. ಬಿ.ಸತ್ಯನಾರಾಯಣ ಅವರು ಹಾಕಿ ಕೊಟ್ಟಿರುವ ಮಾರ್ಗದರ್ಶನದಲ್ಲಿ ನಡೆಯುತ್ತೇನೆ. ರಾಜ್ಯದಲ್ಲಿ ಜೆಡಿಎಸ್ ಪಕ್ಷ ಅಧಿಕಾರಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ಪುನೀತ್ ಗೌಡ ಹೇಳಿದರು. ಅವರು ನಗರದಲ್ಲಿ ಪುನೀತ್ ಗೌಡ ಬ್ರಿಗೇಡ್ ಹಾಗೂ ಅಭಿಮಾನಿಗಳು ಏರ್ಪಡಿಸಿದ್ದ ಪುನೀತ್ ಗೌಡ ಅವರ ಹುಟ್ಟು ಹಬ್ಬ ಆಚರಣೆಯಲ್ಲಿ ಭಾಗವಹಿಸಿ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಸುಮಾರು 2000 ಕ್ಕೂ ಹೆಚ್ಚು ಕುಡಿಯುವ ನೀರಿನ ಕ್ಯಾನ್‌ಗಳನ್ನು ವಿತರಿಸಿ ಮಾತನಾಡಿದರು. ತಾಲ್ಲೂಕಿನಲ್ಲಿ ಜನತೆ ತಮ್ಮ ಆರೋಗ್ಯದ ದೃಷ್ಟಿಯಿಂದ ಶುದ್ಧ ಕುಡಿಯುವ ನೀರನ್ನು ಬಳಸುವುದರ ಮೂಲಕ ಬಹುತೇಕ ಅನಾರೋಗ್ಯ ಬಾರದಂತೆ ತಡೆಗಟ್ಟಬಹುದು, ಮನುಷ್ಯನಿಗೆ ಜೀವಿಸಲು ಅತೀ ಮುಖ್ಯವಾಗಿ ಬೇಕಿರುವುದು ಶುದ್ಧ ಗಾಳಿ, ನೀರು ಹಾಗೂ ಆಹಾರ, ಈ ಎಲ್ಲಾವನ್ನು ಗಮನದಲ್ಲಿಟ್ಟುಕೊಂಡು ಇಂದು ಕುಡಿಯುವ ನೀರಿನ ಕ್ಯಾನ್ ವಿತರಣೆ ಮಾಡುವುದರ ಮೂಲಕ ನನ್ನ ಹುಟ್ಟಿಹಬ್ಬಕ್ಕೆ ನನ್ನ ಅಭಿಮಾನಿಗಳು ನಿಜಾರ್ಥ ನೀಡಿದ್ದಾರೆಎಂದರು, ಶಿರಾ ತಾಲೂಕಿನಲ್ಲಿ ದಿ. ಬಿ.ಸತ್ಯನಾರಾಯಣ ಅವರು ಸಾವಿರಾರು ಜನರಿಗೆ ಹಕ್ಕುಪತ್ರ ನೀಡಿದ ಮಹಾನ್ ನಾಯಕರು. ಎಲ್ಲಾ ಜಾತಿ ಜನಾಂಗದವರನ್ನು ರಾಜಕೀಯವಾಗಿ ಬೆಳೆಸಿದವರು. ಅವರ ಅವಧಿಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಆದ್ದರಿಂದ ಅವರ ಪುತ್ಥಳಿಯನ್ನು ನಿರ್ಮಿಸಲು ನಗರಸಭೆ ವತಿಯಿಂದ ಸ್ಥಳವಾಕಾಶ ನೀಡಬೇಕು. ಅದಕ್ಕೆ ನಗರಸಭೆ ಪೌರಾಯುಕ್ತರಿಗೆ ಮನವಿ ಮಾಡುವುದಾಗಿ ತಿಳಿಸಿದರು. ಇಂದು ನನ್ನ ಹುಟ್ಟು ಹಬ್ಬವನ್ನು ಸಮಾಜಮುಖಿ ಕೆಲಸ ಮಾಡುವುದರ ಮೂಲಕ ಅದ್ದೂರಿಯಾಗಿ ಆಚರಿಸಿದ ಎಲ್ಲರಿಗೂ ನಾನು ಋಣಿಯಾಗಿರುತ್ತೇನೆ. ನನ್ನ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಂಡು ಹೋಗುತ್ತೇನೆ ಎಂದರು.

ತುಮಕೂರು ಹಾಲು ಒಕ್ಕೂಟದ ನಿರ್ದೇಶಕ ಎಸ್.ಆರ್.ಗೌಡ ಮಾತನಾಡಿ ಶಿರಾ ತಾಲೂಕಿನ ಯುವ ಜನತಾ ದಳದ ಅಧ್ಯಕ್ಷ ಪುನೀತ್ ಗೌಡ ಅವರ ಹುಟ್ಟು ಹಬ್ಬವನ್ನು ತಾಲೂಕಿನ ಯುವ ಬಳಗ ಅದ್ದೂರಿಯಾಗಿ ಆಚರಣೆ ಮಾಡಿದ್ದಾರೆ. ಪುನೀತ್ ಗೌಡ ಅವರು ಮಿಂಚಿನ ಸಂಚಲನ ಮಾಡಿ ಪಕ್ಷ ಸಂಘಟಿಸಿ ಸಮರ್ಥ ಯುವ ನಾಯಕನಾಗಿ ಹೊರ ಹೊಮ್ಮಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಅಧಿಕಾರ ಸಿಗಲಿ ಎಂದರು.

ರಾಜ್ಯ ಜೆಡಿಎಸ್ ಪರಿಷತ್ ಅಧ್ಯಕ್ಷ ಆರ್.ಉಗ್ರೇಶ್ ಮಾತನಾಡಿ ಪುನೀತ್ ಗೌಡ ಅವರು ದಿ. ಬಿ.ಸತ್ಯನಾರಾಯಣ ಅವರ ಆದರ್ಶವನ್ನು ನಾವೆಲ್ಲರೂ ಅಳವಡಿಸಿಕೊಂಡು ಅವರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯಬೇಕು ಎಂದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಸತ್ಯಪ್ರಕಾಶ್ ಮಾತನಾಡಿ ಯುವ ನಾಯಕ ಪುನೀತ್ ಗೌಡ ಅವರು ತಮ್ಮ ಶಕ್ತಿ ಮೀರಿ ಸಮಾಜ ಸೇವೆ ಮಾಡುತ್ತಿದ್ದಾರೆ. ಎಲ್ಲರ ಆರ್ಶೀವಾದ ಅವರ ಮೇಲಿರಲಿ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಜಿ.ಪಂ. ಉಪಾಧ್ಯಕ್ಷ ಮುದಿಮಡು ರಂಗಶಾಮಯ್ಯ, ಮುಖಂಡರಾದ ಕಲ್ಕೆರೆ ರವಿಕುಮಾರ್, ನೇಜಂತಿ ಅಭಿಲಾಷ್ ಗೌಡ, ಎಂಜಲಗೆರೆ ತಿಪ್ಪೇಸ್ವಾಮಿ, ರಾಮಕೃಷ್ಣ, ಮುದ್ದುಗಣೇಶ್, ಮಲ್ಲೇಗೌಡ, ಬಪ್ಪಣ್ಣ, ರಂಗನಾಥ ಗೌಡ, ಬೊಮ್ಮಗಾನಹಳ್ಳಿ ಮೋಹನ್, ಹುಲಿಕುಂಟೆ ಪ್ರವೀಶ್, ಶಶಾಂಕ್, ಕಲ್ಲಹಳ್ಳಿ ಉಮೇಶ್, ರಾಮು, ಚೇತನ್ ಬರಗೂರು, ಕಿರಣ್, ಹರ್ಷ ಪಟೇಲ್ ಸೇರಿದಂತೆ ಹಲವರು ಹಾಜರಿದ್ದರು.

# ಎತ್ತಿನ ಹೊಳೆ ನೀರಾವರಿ ಯೋಜನೆ ಕಾಮಗಾರಿಗೆ ಅಡ್ಡಿ ಪಡಿಸುತ್ತಿದ್ದೀರ : ಮುರಳಿಧರ ಹಾಲಪ್ಪ ಆಕ್ರೋಶ

ಚಿಕ್ಕನಾಯಕನಹಳ್ಳಿ: ಕೇಂದ್ರ ಸರ್ಕಾರ ಕಾರ್ಪರೇಟರ್ ಗಳಾದ ಅಂಬಾನಿ ಅದಾನಿಗಳಿಗೆ ಸಾವಿರಾರು ಎಕರೆ ಜಮೀನು ನೀಡಿದ್ದೀರ ಆದರೆ ಸಣ್ಣಪುಟ್ಟ ತಪ್ಪುಗಳನ್ನ ಎತ್ತಿಹಿಡಿದು ಎತ್ತಿನ ಹೊಳೆ ನೀರಾವರಿ ಯೋಜನೆ ಕಾಮಗಾರಿಗೆ ಅಡ್ಡಿ ಪಡಿಸುತ್ತಿದ್ದೀರ ಎಂದು ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಮುರಳಿಧರ ಹಾಲಪ್ಪ ಎಂದು ಆಕ್ರೋಶ ವ್ಯೆಕ್ತಪಡಿಸಿದರು . ತಾಲ್ಲೂಕಿನ ಕೆ.ಬಿ.ಕ್ರಾಸ್ ಮತ್ತು ಟೋಲ್ ಮದ್ಯೆ ಹಾದು ಹೊಗುವ ಎತ್ತಿನಹೊಳೆ ಯೋಜನೆಯ ನಾಲಾ ಕಾಮಗಾರಿ ಸ್ಥಳದಲ್ಲಿ ನಾಲ್ಕು ತಾಲ್ಲೂಕಿನ ಮುಖಂಡರ ಜನ ಆಂದೋಲನ ಸಭೆಯಲ್ಲಿ ನೇತೃತ್ವವಹಿಸಿ ಮಾತನಾಡಿದರು .2014ರಲ್ಲಿ ಅಂದಿನ ಸಿಎಂ ಸಿದ್ಧರಾಮಯ್ಯ ಎತ್ತಿನ ಹೊಳೆ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದ್ದರು. ಅಲ್ಲಿಂದ ಇಲ್ಲಿಯವರೆಗೂ 23ಸಾವಿರ ಕೋಟಿ ಖರ್ಚುಆಗಿದೆ ಕೇಂದ್ರ ಸರ್ಕಾರದ ಒಂದು ನಯಪೈಸ ಅನುನುದಾನ ನೀಡಿಲ್ಲ. ಅಷ್ಟು ಸಂಪೂರ್ಣ ಹಣ ನಮ್ಮ ರಾಜ್ಯದ ಜನತೆಯ ತೆರಿಗೆಯ ಮೂಲದ್ದಾಗಿದ್ದೆ. ಆ ಹಣವನ್ನ ರಾಜ್ಯ ಸರ್ಕಾರ ನೀಡಿ ಕಾಮಗಾರಿ ಮಾಡಿಸುತ್ತಿದೆ.. ಚಿಕ್ಕಮಗಳೂರು ಹಾಸನ ತುಮಕೂರು ಚಿಕ್ಕಬಳ್ಳಾಪುರ ಕೋಲಾರ ಸೇರಿದಂತೆ ಎಂಟು ಜಿಲ್ಲೆಗಳ ರೈತರ ಬದುಕು ಹಸನಾಗುವುದರ ಜೊತೆಗೆ ಅಂತರ್ ಜಲ ವೃದ್ದಿಯಾಗಿ ಕುಡಿಯುವ ನೀರಿನ ಅನುಕೂಲವಾಗುತ್ತದೆ ಎಂದರು. ಯೋಜನೆಯ ಕಾಮಗಾರಿಯಬಗ್ಗೆ ಪ್ರಾರಂಭದಲ್ಲೆ ಕೇಂದ್ರಸರ್ಕಾರಕ್ಕೆ ವರದಿ ಸಲ್ಲಿಸಿ ಸಿದ್ದರಾಮಯ್ಯ ಡಿಕೆಶಿರವರ ನೇತೃತ್ವದಲ್ಲಿ ಶಂಕುಸ್ಥಾಪನೆ ನೆರವೇರಿಸಿ ಕಾಮಗಾರಿಯನ್ನ ಪ್ರರಂಭಿಸಲಾಗಿತ್ತು.ಕಾಮಗಾರಿ ಶೇ.90ರಷ್ಟು



ಮುಗಿಯುವ ಹಂತ ತಲುಪುವ ಮಟ್ಟಕ್ಕೆ ಬಂದಾಗ ಅರಣ್ಯ ಮತ್ತು ಪರಿಸರ ಇಲಾಖೆ ತಕರಾರು ತೆಗೆದು ನಾಲೆಪಕ್ಕ ಹೆಚ್ಚುವರಿಯಾಗಿ ಜಾಗ ತೆಗೆದುಕೊಂಡಿದ್ದೀರ ಎಂದು 11 ಪ್ರಶ್ನೆಗಳನ್ನ ಕೇಳಿದೆ. ಅರಣ್ಯ ಪ್ರದೇಶ ಬಳಕೆಯಾಗಿದೆ ಎಂದು ಹೇಳುತ್ತಿರುವ ಜಾಗದಲ್ಲಿ ರೈತರು ಉಳುಮೆ ಮಾಡುತ್ತಿದ್ದಾರೆ ಎತ್ತಿನ ಹೊಳೆ ನೀರಾವರಿ ಯೋಜನೆಯ ಇಲಾಖೆ ಸಂಜಾಯಿಸಿ ಉತ್ತರ ನೀಡಿದೆ .ನವಂಬರ್ ತಿಂಗಳಲ್ಲಿ ಡೆಲ್ಲಿಗೆ ತೆರಲಿ ಅರಣ್ಯ ಮತ್ತು ಪರಿಸರ ಇಲಾಖೆಯ ಸಚಿವರನ್ನ ಬೇಟಿ ಮಾಡಿ 76 ಲಕ್ಷ ಜನತೆಗೆ ಅನುಕೂಲವಾಗುತ್ತದೆ ಎಂದು ಸಮಸ್ಯೆ ಬಗ್ಗೆ ಮನವರಿಕೆ ಮಾಡಿದಾಗ ತೊಡಕು ನಿವಾರಣೆಯನ್ನ ಕೇಂದ್ರ ಸಚಿವರು ಭರವಸೆ ನಿಡ್ಡಿದ್ದಾದರು ಡಿಸೆಂಬರ್ ಮೊದಲ ವಾರ ಬಂದರೂ ಇನ್ನೂ ಯಾವ ಬೆಳವಣಿಗೆ ಕಾಣುತ್ತಿಲ್ಲಾ ಈ ನಿಟ್ಟಿನಲ್ಲಿ ಮುಂದೆ ತುಮಕೂರಿನಲ್ಲಿ ಒಂದು ಲಕ್ಷ ಜನ ಸೇರಿಸಿ ಅಚ್ಚುಕಟ್ಟಾಗಿ ಎಲ್ಲಾ ತಾಲ್ಲೂಕಿನ ಮುಖಂಡರು ನೀರಾವರಿ ಸಚಿವರು ಹಾಗು ಜಿಲ್ಲಾ ಉಸ್ತುವಾರಿ ಸಚಿವರನ್ನ ಆಹ್ವಾನಿಸಿ ಕೇಂದ್ರದ ವಿರುದ್ದ ಜನ ಆಂದೋಲನ ಮೂಲಕ ಎತ್ತಿನಹೊಳೆ ಯೋಜನೆಗೆ ತೊಡಕು ಮಾಡಿರುವ ಕೇಂದ್ರ ಸರ್ಕಾರ ಸಹಕಾರ ನೀಡುವಂತೆ ಎಚ್ಚರಿಕೆ ಗಂಟೆಯನ್ನ ಭಾರಿಸಲಾಗುವುದು .ಕೇಂದ್ರ ಸರ್ಕಾರ ಗಮನ ಹರಿಸಿ ತಾಂತ್ರಿಕ ದೊಷವನ್ನ ಅರಿತು ಕಾಮಗಾರಿ ಪೂರ್ಣ ಮಾಡಲು ಅನುಮಾಡಿಕೊಡಬೇಕೇಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು. ಮಾಜಿ ಶಾಸಕ ಬಿ.ಲಕ್ಕಪ್ಪ ಮಾತನಾಡಿ ರೈತ ಕೃಷಿಗೆ ನೀರಿನ ಮೂಲಗಳಾದ ಅಂತರ್ ಜಲಕೆರೆ ಕಟ್ಟೆಗಳನ್ನ ಅವಲಂಬಿಸಿಕೊಂಡಿರುತ್ತಾನೆ. ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ನೀರು ಇಲ್ಲದಿದ್ದರೆ ವ್ಯೆವಸಾಯವಿಲ್ಲ .ಸತತವಾಗಿ ಒಂದೇ ಸಮನೆ ಮಳೆ ಬರುವುದಿಲ್ಲಾ ಎತ್ತಿನ ಹೊಳೆ ನೀರು ಹರಿದಾಗ ಕೆರೆಗಳು ತುಂಬಿಕೊಂಡು ಅಂತರ್ ಜಲ ವೃದ್ದಿಯಾಗುತ್ತದೆ. ಈನಿಟ್ಟಿನಲ್ಲಿ ಕೇಂದ್ರ ಸರ್ಕಾರ ದೊಡ್ಡಮನಸ್ಸು ಮಾಡಿ ಸಣ್ಣಪುಟ್ಟ ಲೋಪಗಳನ್ನ ಎತ್ತಿ ಹಿಡಿಯ ಬಾರದು. ನಾವು ನೀರಿಗಾಗಿ ಹೋರಾಟ ಮಾಡಲು ಸಿದ್ಧವಾಗಿದ್ದೀವಿ ಎಂದರು. ಮಾಜಿ ಸಾಸಕ ಗಂಗಹನುಮಯ್ಯ ಮಾತನಾಡಿ ಜಿಲ್ಲೆಯ ಎತ್ತಿನ ಹೊಳೆ ಹೋರಾಟ ಮಾತ್ರವಲ್ಲದೆ ಹೇಮಾವತಿ ಭದ್ರ ಮೇಲ್ದಂಡೆ ಯೋಜನೆಯ ಹೆಚ್ಚಿನ ಅನುಕೂಲತೆಯಾಗಬೇಕಾಗಿದೆ. ಯಾವುದೇ ಕೆಲಸ ಹೊರಟವಿಲ್ಲದೆ ಫಲಕಾರಿಯಾಗುವುದಿಲ್ಲ. ಜಿಲ್ಲೆಯಲ್ಲಿ ನೀರಾಗಾಗಿ ಹೋರಾಟ ಅನಿವಾರ್ಯವಾಗಿದೆ. ಎತ್ತಿನ ಹೊಳೆ ಯೋಜನೆ ನೀರಾವರಿ ಹೊರಾಟಕ್ಕೆ ಮುರಳಿಧರ ಹಾಲಪ್ಪ ಹೊರಾಟಕ್ಕೆ ನಿಂತಿದ್ದಾರೆ ಅವರಿಗೆ ನಮ್ಮ ಬೆಂಬಲ ವಿದೆ.ರಾಜ್ಯಸರ್ಕಾರ ಎತ್ತಿನ ಹೊಳೆ ಅನುಷ್ಠಾನಕ್ಕೆ ತಂದು ಕಾಮಗಾರಿಯನ್ನು ಮುಕ್ಕಾಲು ಪಾಲು ಮುಗಿದಿದೆ. ಕೇಂದ್ರಸರ್ಕಾರದ ಧೊರಣೆ ಸರಿ ಇಲ್ಲಾ ಕೇಂದ್ರ ಸರ್ಕಾರ ಜನಪರ ಕೆಲಸಕ್ಕೆ ಅನುಕೂಲ ಮಾಡಿಕೊಡಬೇಕೆಂದರು. ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರುಗಳಾದ ಹುಳಿಯಾರಿನ ಪಿ.ಟಿ.ಚಿಕ್ಕಣ್ಣತಿಪಟೂರು ಕಾಂತರಾಜುಗುಬ್ಬಿವೆಂಕಟೇಶ್ತುರುವೇಕೆರೆ ಶಂಕರಪ್ಪ ತೆಂಗು ಬೆಳೆಗಾರರ ಸಂಘದ ಅಧ್ಯಕ್ಷ ಜಯರಾಂ ಸಾವಯುವ ಕೃಷಿಕ ತರಬೇನಹಳ್ಳಿ ಷಡಾಕ್ಷರಿಪಕ್ಷದ ಸೇವಾಧಳ ಕೆ.ಜಿ.ಕೃಷ್ಣೇಗೌಡ ಸೇರಿಂದಂತೆ ನಾಲ್ಕು ತಾಲ್ಲೂಕಿನ ಮುಖಂಡರುಗಳು ಮಾತನಾಡಿದರು. ನಾಲ್ಕು ತಾಲ್ಲೂಕಿನ ನೀರಾವರಿ ಹೋರಾಟದ ಮುಖಂಡುರುಗಳು ಭಾಗವಹಿಸಿದ್ದರು.

# ಸಾವಿತ್ರಿಬಾಯಿ ಫುಲೆರವರ ಜನ್ಮದಿನ: ಮರ್ಯಾದೆಗೇಡು ಹತ್ಯೆಗಳ ವಿರುದ್ಧ ಪ್ರತಿರೋಧ ದಿನ




ನವೋದಯದ ಮಹಾನ್ ವ್ಯಕ್ತಿತ್ವ ಸಾವಿತ್ರಿಬಾಯಿ ಅವರ 195 ನೇ ಜನ್ಮದಿನವನ್ನು ಇಂದು ತುಮಕೂರಿನ ವಿವಿಧ ಮೈದಾನ, ಶಾಲಾ ಕಾಲೇಜುಗಳಲ್ಲಿ, ಹಾಸ್ಟೆಲ್ ಹಾಗೂ ಬಡಾವಣೆಗಳಲ್ಲಿ ಪ್ರತಿರೋಧ ದಿನವನ್ನಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಲಕ್ಕಪ್ಪ ಮಾತನಾಡಿ, ಸಾವಿತ್ರಿಬಾಯಿ ಫುಲೆ ಅವರು ಕೇವಲ ಶಾಲೆಯನ್ನು ತೆರೆಯಲಿಲ್ಲ. ಬದಲಾಗಿ ಸಾವಿರಾರು ವರ್ಷಗಳ ಶೋಷಣೆ ವಿರುದ್ಧ ಕೇವಲ ಒಂದು ಪುಸ್ತಕ ಮತ್ತು ಎದೆಯ ತುಂಬಾ ಧೈರ್ಯವನ್ನು ಅಸ್ತ್ರವನ್ನಾಗಿ ಮಾಡಿಕೊಂಡು ಯುದ್ಧವನ್ನೇ ಸಾರಿದರು. ಅವರು ಪುಣೆಯ ಬೀಡೆವಾಡ ಶಾಲೆಗೆ ನಡೆದುಕೊಂಡು ಹೋಗುವಾಗ ಜನ ಅವರಿಗೆ ಕೆಸರು, ಸಗಣಿ ಮತ್ತು ಕಲ್ಲುಗಳನ್ನ ಎಸೆದಿದ್ದಾರೆ, ಆದರೆ ಅವರು ಯಾವುದೇ ಅವಮಾನಕ್ಕೆ ಹಿಂಜರಿಯದೆ ಅಂದು ಹೆಣ್ಣುಮಕ್ಕಳ ಹಾಗೂ ಕೆಳ ವರ್ಗದ ಮಕ್ಕಳಿಗಾಗಿ ಶಾಲೆಗಳನ್ನು ತೆರೆದರು. ಜೊತೆಗೆ ಅಂದಿನ ಸಮಾಜದಲ್ಲಿದ್ದ ಆಳವಾಗಿ ಬೇರೂರಿದ್ದ ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿದರು ಹಾಗೂ ಅನ್ಯ ಜಾತಿಯ ವಿವಾಹವನ್ನು ಬೆಂಬಲಿಸಿ ಸ್ವತಃ ತನ್ನ ಮಗನಿಗೆ ಅನ್ಯ ಜಾತಿ ವಿವಾಹವನ್ನು ಮಾಡಿಸುವುದರ ಮೂಲಕ ಸಮಾಜದಲ್ಲಿ ಜಾತಿ ವ್ಯವಸ್ಥೆ, ಮೂಢನಂಬಿಕೆ, ಹಳೆ ಕಂದಾಚಾರಗಳನ್ನು ತೊಲಗಿಸಲು ಅದರ ವಿರುದ್ಧ ಸಿಡಿದೆದ್ದರು.

ಆದರೆ ರಾಜ್ಯದಲ್ಲಿ ಇತ್ತೀಚಿಗೆ ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳು ಹೆಚ್ಚುತ್ತಿರುವುದು ಬಹಳ ವಿಷಾದದ




ಸಂಗತಿ. ಸರ್ಕಾರಗಳು ಇಂದು ಮಹಿಳೆಯರ ಭದ್ರತೆಯ ಕುರಿತು ಮೌಖಿಕವಾಗಿ ಮಾತನಾಡುತ್ತಿವೆಯೇ ಹೊರತು, ಅದನ್ನು ತಡೆಗಟ್ಟುವಲ್ಲಿ ಕಾರ್ಯಕ್ಷಮತೆಯನ್ನು ತೋರುತ್ತಿಲ್ಲ. ಇದಲ್ಲದೇ, ಇತ್ತೀಚಿಗೆ ಮರ್ಯಾದೆ ಹೀನ ಹತ್ಯೆಗಳು ಸಹ ಹೆಚ್ಚುತ್ತಿವೆ. ಜಾತಿ–ಧರ್ಮಗಳ ಹೆಸರಿನಲ್ಲಿ ಜನರ ಮಧ್ಯೆ ಬೇಧ ಭಾವವನ್ನು ಮೂಡಿಸಿ, ಅವರನ್ನು ಕತ್ತಲಿನಲ್ಲಿಟ್ಟು, ತಮ್ಮ ರಾಜಕೀಯ ಉದ್ದೇಶಗಳಿಗೆ ಜನಗಳನ್ನು ಬಲಿಕೊಡುತ್ತಿರುವ ಪ್ರಸಂಗಗಳು ಹೆಚ್ಚುತ್ತಿವೆ, ಇಂತಹ ಸಂದರ್ಭದಲ್ಲಿ ಶಿಕ್ಷಣವು ಮಹತ್ತರ ಪಾತ್ರವನ್ನು ವಹಿಸಬೇಕಿದೆ. ವಿಪರ್ಯಾಸವೆಂದರೆ, ರಾಜ್ಯ ಸರ್ಕಾರವೇ ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ 40,000 ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿವೆ. ಈ ಮೂಲಕ ಬಡ ಕೃಷಿ–ಕಾರ್ಮಿಕರ, ದೀನ–ದಲಿತರನ್ನು ಶಿಕ್ಷಣದಿಂದ ಶಾಲಾ ಹಂತದಲ್ಲಿಯೇ ಹೊರಗುಳಿಯುವಂತೆ ನೀತಿಯನ್ನು ರೂಪಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ದೇಶದಲ್ಲಿ ಬಡ ಜನರು, ಮಹಿಳೆಯರ ಪರವಾಗಿ ಶ್ರಮಿಸಿದ ನವೋದಯದ ಮಹಾನ್ ವ್ಯಕ್ತಿತ್ವ ಸಾವಿತ್ರಿಬಾಯಿ ಫುಲೆ ರವರ ಜನ್ಮ ದಿನದ ಹಿನ್ನಲೆಯಲ್ಲಿ ಅವರ ಆಶಯಗಳನ್ನು ಸಾಕಾರಗೊಳಿಸುವಂತೆ ಚಳುವಳಿಯನ್ನು ಕಟ್ಟಿ ಬೆಳೆಸಲು ಕರೆ ನೀಡಿದರು.

ಈ ಸಂದರ್ಭದಲ್ಲಿ ಎಐಡಿಎ ಪದಾಧಿಕಾರಿಗಳಾದ ಭರತ್, ಹುಸೇನಪ್ಪ, ಭೂತೇಶ್ ಹಾಗೂ ವಿದ್ಯಾರ್ಥಿಗಳು ಮತ್ತು ಜನರು ಉಪಸ್ಥಿತರಿದ್ದರು.

# ಐಎಎಸ್ ಅಧಿಕಾರಿ,ಚಿಕ್ಕಬಳ್ಳಾಪುರ ಡಿಸಿ ಜಿ.ಪ್ರಭು ಅವರಿಗೆ ಅಧಿಕಾರಿ ವೃಂದದವರಿಂದ ಹೃದಯಸ್ಪರ್ಶಿ ಬೀಳ್ಕೊಡುಗೆ

ತುಮಕೂರು– ಕಳೆದ ಎರಡೂವರೆ ವರ್ಷಗಳಿಂದ ತುಮಕೂರು ಜಿಲ್ಲಾ ಪಂಚಾಯತ್ ಸಿಇಓ ಆಗಿ ಚಿಕ್ಕಬಳ್ಳಾಪುರ ಡಿಸಿಯಾಗಿ ಪದೋನ್ನತಿ ಹೊಂದಿರುವ ಕ್ರಿಯಾಶೀಲ ಐಎಎಸ್ ಅಧಿಕಾರಿ ಜಿ.ಪ್ರಭು ಅವರಿಗೆ ಜಿಲ್ಲೆಯ ಅಧಿಕಾರಿ ವೃಂದದವರಿಂದ ಹೃದಯಸ್ಪರ್ಶಿ ಬೀಳ್ಕೊಡುಗೆ ನೀಡಲಾಯಿತು.

ಪ್ರಭು ಅವರ ಸಹ ಒಡನಾಡಿಗಳಾಗಿ ಸೇವೆ ಸಲ್ಲಿಸಿದ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಾದ ಸಂಜೀವಪ್ಪ, ಈಶ್ವರಚಂದ್ರ, ಮುಖ್ಯ ಲೆಕ್ಕಾಧಿಕಾರಿ ನರಸಿಂಹಮೂರ್ತಿ, ಮಧುಗಿರಿ ಉಪವಿಭಾಗಾಧಿಕಾರಿ ಗೋಟೂರು ಶಿವಪ್ಪ, ಯೋಜನಾ ನಿರ್ದೇಶಕ ನಾರಾಯಣಸ್ವಾಮಿ, ಮುಖ್ಯ ಯೋಜನಾಧಿಕಾರಿ ಸಣ್ಣಮಸಿಯಪ್ಪ, ಡಿಎಚ್‌ಓ ಡಾ.ಚಂದ್ರಶೇಖರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಕೃಷ್ಣಪ್ಪ, ಸಿರಾ ಇಓ ಹರೀಶ್, ಕೊರಟಗೆರೆ ತಹಶೀಲ್ದಾರ್, ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಕೃಷ್ಣಕಾಂತ್, ಜಿ.ಪಂ. ನೌಕರ ವೃಂದದಿಂದ ಲಕ್ಷ್ಮೀ, ಸೋಷಿಯಲ್ ಆಡಿಟ್‌ನಿಂದ ಚಂದ್ರಣ್ಣ, ಪಿಡಿಓಗಳ ಪರವಾಗಿ ನಾಗರಾಜು, ಜಿ.ಪಂ. ಅಭಿವೃದ್ಧಿ ಶಾಖೆಯ ಮಂಜುನಾಥ್, ಡಿಸಿಎಫ್ ದೇವರಾಜ್ ಅವರು ಪ್ರಭು ಅವರ ಕಾರ್ಯ ಸಾಧನೆಯ ಬಗ್ಗೆ ಮುಕ್ತ ಅನಿಸಿಕೆಯನ್ನು ಹಂಚಿಕೊಂಡರು.

2023 ಜೂನ್‌ನಲ್ಲಿ ಪ್ರಭು ಅವರು ಅಧಿಕಾರ ವಹಿಸಿಕೊಂಡಾಗ ಅವರ ಹತ್ತಿರ ಕೆಲಸ ಮಾಡುವುದು ಕಷ್ಟ. ಕೋಪಗೊಂಡು ಬೈಯ್ಯುತ್ತಾರೆ ಎಂದೆಲ್ಲ ಭಾವಿಸಿದ್ದೆವು. ಆದರೆ ಅವರ ಸಹೋದ್ಯೋಗಿಗಳಾಗಿ ಕಾರ್ಯನಿರ್ವಹಿಸಿದಾಗ ಪ್ರಭು ಅವರು ನಿಜವಾಗಿ ಹೇಗಿದ್ದಾರೆ. ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಕೊಡಿಸಲು ನೌಕರರು ಯಾವ ರೀತಿ ಸನ್ನದ್ದರಾಗಿರಬೇಕೆಂಬುದು ಪ್ರಾಯೋಗಿಕವಾಗಿ ನಮಗೆ ತೋರಿಸಿಕೊಟ್ಟಿದ್ದಾರೆ. ಅವರ ಸಿಇಓ ಅವಧಿಯಲ್ಲಿ ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಮಹತ್ವದ ಒತ್ತುಕೊಟ್ಟು ನರೇಗಾ, ಜೆಜೆಎಂ ಅನುಷ್ಠಾನದಲ್ಲಿ



ರಾಷ್ಟ್ರಮಟ್ಟದಲ್ಲಿ ತುಮಕೂರಿನ ಗರಿ ಮೂಡಲು ಕಾರಣರಾಗಿದ್ದಾರೆ. ರಾಜಕೀಯ ಬಾಹ್ಯ ಒತ್ತಡಗಳನ್ನು ತಾವೇ ಸ್ವೀಕರಿಸಿ ಅಧಿಕಾರಿಗಳು, ನೌಕರರು ಮುಕ್ತವಾಗಿ ಕಾರ್ಯನಿರ್ವಹಿಸುವ ಅವಕಾಶ ಕಲ್ಪಿಸಿದರು. ಸಂವಿಧಾನ ಜಾಗೃತಿ ಅಂಗವಾಗಿ ಜಿಲ್ಲೆಯಾದ್ಯಂತ 95 ಕಿ.ಮೀ ಮಾನವ ಸರಪಳಿ ನಿರ್ಮಿಸುವ ಯೋಜನೆ ಹಮ್ಮಿಕೊಂಡು ಯಶಸ್ವಿಯಾಗಿ ಕಾರ್ಯಗತಗೊಳಿಸಿದ್ದು ಮಹತ್ವದ ದಾಖಲೆಯೆನಿಸಿತು. 3 ಸಿಎಂ ಕಾರ್ಯಕ್ರಮ ತುಮಕೂರು ದಸರಾ, ಕ್ರೀಡಾಕೂಟ ಹೀಗೆ ಜಿಲ್ಲೆಯ ಪ್ರತಿಯೊಂದು ಕಾರ್ಯಕ್ರಮಗಳಲ್ಲೂ ಪ್ರಭು ಅವರ ಹೆಗ್ಗುರುತನ್ನು ಕಾಣಬಹುದು. ಅವರ ಈ ಎಲ್ಲಾ ಕಾರ್ಯ ಸಾಧನೆಯ ಹಿಂದೆ ಪತ್ನಿ, ಮಕ್ಕಳು, ಪೋಷಕರ ಸಹಕಾರವನ್ನು ನಾವು ನೆನೆಯಬೇಕು. ಇಂತಹ ಕ್ರಿಯಾಶೀಲ ಅಧಿಕಾರಿಯನ್ನು ಜಿಲ್ಲೆಯಿಂದ ಬೀಳ್ಕೊಡಲು ಮನಸ್ಸು ಭಾರವಾದರೂ ಡಿಸಿಯಾಗಿ ಉನ್ನತ ಅವಕಾಶ ಅವರಿಗೆ ದೊರೆತಿದೆ. ನಾಯಕತ್ವ ಗುಣ ಅವರಲ್ಲಿದೆ. ಮುಂದೆ ತುಮಕೂರಿಗೆ ಡಿಸಿಯಾಗಿಯೇ ಬರಬೇಕೆಂಬುದು ನಮ್ಮ ಅಭಿಲಾಷೆಯಾಗಿದೆ ಎಂದು ಅನೇಕರು ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ಹಂಚಿಕೊಂಡರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಜಿ.ಪ್ರಭು ಅವರು, ನನ್ನ ಕರ್ತವ್ಯದ ಸೇವಾವಧಿಯಲ್ಲಿ ಆರ್‌ಡಿಪಿಆರ್ ಇಲಾಖೆಯಲ್ಲಿ ಸುಮಾರು 5 ವರ್ಷಗಳ ಕಾಲ ಚಿಕ್ಕಮಗಳೂರು ಹಾಗೂ ತುಮಕೂರು ಜಿಲ್ಲಾ ಪಂಚಾಯತ್ ಸಿಇಓ ಆಗಿ ಕಳೆದ ಅವಧಿ ನನ್ನ ಜೀವನದಲ್ಲಿ ದೊಡ್ಡ ಸೌಭಾಗ್ಯವೇ ಸರಿ. ನಾನು ಸಿಇಓ ಆಗಿ ಮುಂದವರಿಯದಿದ್ದರೆ ಹಳ್ಳಿಗಾಡಿನ ಜನರು ಸೇರಿದಂತೆ ವಿವಿಧ ಇಲಾಖೆಗಳ ಮೂಲಕ ದೊಡ್ಡ ಸಮೂಹಕ್ಕೆ ಸಲ್ಲಿಸಬಹುದಾದ ಅವಕಾಶವನ್ನೇ ಕಳೆದುಕೊಳ್ಳುತ್ತಿದ್ದೆ. ಈ ಅವಕಾಶವನ್ನು 2023ರಲ್ಲಿ ತುಮಕೂರಿಗೆ ಕಲ್ಪಿಸಿದ ಜಿಲ್ಲಾ ಉಸ್ತುವಾರಿ ಸಚಿವರಾದ ಪರಮೇಶ್ವರ್ ಹಾಗೂ ಮುಖ್ಯಮಂತ್ರಿಗಳಿಗೆ ನಾನು ಆಭಾರಿಯಾಗಿದ್ದೇನೆ. ನನ್ನ ಎರಡೂವರೆ ವರ್ಷದ ತುಮಕೂರು ಜಿಲ್ಲೆಯ ಸಿಇಓ ಪಯಣದಲ್ಲಿ ಸಮಯವನ್ನು ಲೆಕ್ಕಿಸದೆ ಇಲಾಖೆಗಳ ಗುರಿ ಯೋಜನೆ ತಲುಪಲು ನನ್ನ ಜತೆ ಹೆಜ್ಜೆ ಹಾಕಿದ ಜಿ.ಪಂ. ಸೇರಿದಂತೆ ಎಲ್ಲಾ ಇಲಾಖೆಗಳು ಅಧಿಕಾರ ವರ್ಗ, ನೌಕರರು ವಿಶೇಷವಾಗಿ ಸಚಿವರು, ಶಾಸಕರು, ಸಂಸದರು, ಇತರೆ ಎಲ್ಲಾ ಜನಪ್ರತಿನಿಧಿಗಳು, ಮಾಧ್ಯಮದವರು, ಸಾರ್ವಜನಿಕರು, ಸಂಘಟನೆಗಳ ಮುಖಂಡರು ಎಲ್ಲರಿಗೂ ನನ್ನ ಹೃದಯಂತಾರಳದಿಂದ ವಂದಿಸುತ್ತೇನೆ ಎಂದು ಹೇಳಿದರು.

ಶಿಕ್ಷಣ ಸಾಮಾಜಿಕ ಹಾಗೂ ವೈಯಕ್ತಿಕ ಪ್ರಗತಿಗೂ ಸಿಕ್ಕಿರುವ ಪ್ರಮುಖ ಅಸ್ತ್ರ. ಈ ಶಿಕ್ಷಣದ ಪ್ರತಿಫಲವಾಗಿ ದೊರೆತಿರುವ ಸರ್ಕಾರಿ ನೌಕರಿಯನ್ನು ದೇಶ ಸೇವೆಗೆ ಸಿಕ್ಕಿರುವ ಮಹತ್ವದ ಅವಕಾಶವೆಂದು ಭಾವಿಸಿ ಅದನ್ನು ಸಾರ್ಥಕಪಡಿಸಿಕೊಳ್ಳುವ ನಿಟ್ಟಿನಲ್ಲಿ ಇಲಾಖೆ ಯೋಜನೆಗಳನ್ನು ಶೇ. 100 ರಷ್ಟು ಕಾರ್ಯಗತಗೊಳಿಸೋಣ. ತುಮಕೂರಿನ ಸೇವಾವಧಿಯಲ್ಲಿ ದೊರೆತ ಪ್ರೀತಿ, ಸಾಧನೆಯ ಅವಕಾಶಗಳು ನನ್ನ ಜೀವನದಲ್ಲಿ ಮರೆಯಲಾಗದ ನೆನಪಾಗಿವೆ ಎಂದರು.

ನಂತರ ಜಿಲ್ಲಾ ಪಂಚಾಯತ್ ಅಧಿಕಾರಿ ನೌಕರ ವೃಂದದವರು ಸೇರಿದಂತೆ ವಿವಿಧ ಇಲಾಖೆಯವರು ಸಾರ್ವಜನಿಕರು ವಿಶೇಷವಾಗಿ ಜಿ. ಪ್ರಭು ದಂಪತಿಯನ್ನು ಸನ್ಮಾನಿಸಿ ಜಿಲ್ಲಾಧಿಕಾರಿಗಳಾಗಿ ಮತ್ತಷ್ಟು ಹೆಸರು ಮಾಡಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಪಿಡಬ್ಲ್ಯೂಡಿ ಹಾಗೂ ಆರ್‌ಡಿಪಿಆರ್ ಕಾರ್ಯಪಾಲಕ ಅಭಿಯಂತರರು, ತೋಟಗಾರಿಕಾ ಇಲಾಖೆ ಉಪನಿರ್ದೇಶಕಿ ಶಾರದಮ್ಮ ಮತ್ತಿತರರು ಉಪಸ್ಥಿತರಿದ್ದರು.



